# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೮ - ೨೦೨೪**



## ಚೈತ್ರದ ಭೃಂಗ......


KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


ಸಂಪಾದಕೀಯ........................................................೩

ಅಧ್ಯಕ್ಷರ ಅಪೂರ್ವ ಅಂಕಣ......................................೪

ಹಿನ್ನೋಟ............................................................೭

ಬರಹಗಳು..........................................................೧೯

ಕವನಗಳು...........................................................೨೭

ಚಿನ್ನರ ಮುತ್ತುಗಳು..............................................೩೦

ಕ್ಯಾಮೆರಾ ಕಣ್ಣು..................................................೩೭

# ಸಂಪಾದಕೀಯ

ಯುಗಾದಿ ಸಂಭ್ರಮ

ಬೃಂದಾವನ ಕನ್ನಡದ ಬಂಧುಗಳಿಗೆ ಯುಗಾದಿ ಸಂಭ್ರಮದ ಹಾರ್ದಿಕ ಶುಭಾಶಯಗಳು !!

ಪ್ರತೀ ವರ್ಷದ ಯುಗಾದಿ ಕಳೆಯುತ್ತಿದಂತೆ ಮರ ಗಿಡಗಳ ಹಸಿರಿನ ಚಿಗಿರು ಹೊಸ ಉಲ್ಲಾಸವನ್ನು ಉಂಟು ಮಾಡುತ್ತದೆ. ಮಾಗಿಯ ಚಳಿಯು ಮುಗಿದು ವಸಂತ ಋತುವಿನ ಸಂಭ್ರಮ ಎಲ್ಲರ ಮನೆಯಲ್ಲಿಯೂ ಕಾಣ ಬಹುದು. ಈ ವರ್ಷದ ಮಕ್ಕೊಳೋತ್ಸವ ಸಮಾರಂಭ ಅದ್ದೂರಿಯಾಗಿ ನಡೆದು , ಎಲ್ಲ ಚಿಣ್ಣರ, ಬಣ್ಣ ಬಣ್ಣದ ಚಿತ್ತಾರವನ್ನು ನಾವು ಜನವರಿಯಲ್ಲಿ ನೋಡಿ ನಲಿದೆವು, ಆ ರಂಗು ರಂಗಾದ ಬಣ್ಣವನ್ನು ಹೋಳಿ ಹಬ್ಬದ ಆಚರಣೆಯಲ್ಲಿ ಬೃಂದಾವನ ಬಳಗ ತಮ್ಮ ಸ್ನೇಹಿತರೊಡನೆ ಆಚರಿಸಿದರು.

ಈ ವರ್ಷದ ವಸಂತೋತ್ಸವ ಕಾರ್ಯಕ್ರಮ ಅದ್ಧುರಿಯಾಗಿ ಈಸ್ಟ್ ವಿಂಡ್ಸರ್ ಶಾಲೆಯಲ್ಲಿ ನಡೆಯತು . ಹಬ್ಬ ಎಂದರೆ ಕೇಳಬೇಕೆ? ಹಿರಿಯರಿಂದ ಕಿರಿಯರವರೆಗೆ ಹೊಸ ಹೊಸ ಬಟ್ಟೆಗಳನ್ನು ಧರಿಸಿ ಕನ್ನಡ ಬಳಗದವರೊಂದಿಗೆ ಅದ್ದೂರಿಯಾಗಿ ಆಚರಿಸಿದರು .

ಸ್ಯಾಕ್ಸಾಫೋನ್ ಕಲಾವಿದೆ ಅಂಜಲಿ ಶ್ಯಾನಭೋಗ್ ಅವರು ಮನಮೋಹಕ ಹಾಡುಗಳನ್ನು ಸುಶ್ರಾವ್ಯವಾಗಿ ನುಡಿಸಿ ಎಲ್ಲರ ಮನ ಗೆದ್ದರು , ನಮ್ಮ ಬೃಂದಾವನ ಶಾಲೆಯ ಕಾರ್ಯಕ್ರಮಗಳಂತೂ ಇನ್ನು ಮೆಲಕು ಹಾಕುವಂತಿದೆ.

ಕಿವುಡು ನಾಟಕ ಹೊಟ್ಟೆ ಹುಣ್ಣಾಗಿಸುವಂತೆ ನಗಿಸಿದರೆ, ನೃತ್ಯ , ಗಾಯನ ಎಲ್ಲವು ಕಾರ್ಯಕ್ರಮದಲ್ಲಿ ಸಮ್ಮೇಳಿಸಿತು. ಹಬ್ಬಕ್ಕೆ ವಿಶೇಷ ಹೋಳಿಗೆ ಹಾಗು ಬಾದುಷಾ ನಾಲಿಗೆಯಲ್ಲಿ ಸಿಹಿ ನಿಲ್ಲುವಂತೆ ಮಾಡಿತು .. ಎಲ್ಲರ ಜೀವನವು ಬೇವು -ಬೆಲ್ಲದಂತೆ , ಹೆಚ್ಚು ಸಿಹಿಯಾಗಲಿ ಎಂದು ಆಶಿಸುತ್ತೇವೆ.

ಬೆಂಗಳೂರಿನಲ್ಲಿ ಈ ಬಾರಿ ನೀರಿನ ಹಾಹಾಕಾರ ಬಹಳವಾಗಿ , ಮಳೆ ಇಲ್ಲದೆ ಬಹಳ ತೊಂದರೆಯನ್ನು ಜನರು ಅನುಭವಿಸಿದರು. ಕಾವೇರಿಯಲ್ಲಿ ಒಳ ಹರಿವು ಕಮ್ಮಿ ಯಾಗಿ ಅದರ ತೀಕ್ಷಣತೆಯ ಅನುಭವ ನಗರ ನಿವಾಸಿಗಳಿಗೆ ಆಯಿತು. ಟ್ಯಾಂಕೆರ್ ಮೂಲಕ ಕುಡಿಯುವ ನೀರು ಕೊಂಡು ಕೊಳ್ಳುವ ಜನತೆಗೆ ಬಹಳ ದುಬ್ಬರವಾಗಿ ಹೊರಗಡೆ ಮಾಲ್ ನಲ್ಲಿ ಸ್ನಾನ ಮಾಡಿದ ಘಟನೆಗಳನ್ನು ನೋಡಿದೆವು. ಹೆಚ್ಚಿನ ಮಳೆಯಾಗಿ ನೀರಿನ ತೊಂದರೆ ಕಮ್ಮಿಯಾಗಲಿ ಎಂದು ಆಶಿಸೋಣ !!

ಕಾವೇರಿದ ಚುನಾವಣೆ !! ಭಾರತದ ಲೋಕಸಭಾ ಚುನಾವಣೆಗಳು April 19ರಿಂದ ಪ್ರಾರಂಭವಾಗಿದೆ. ಮೊದಲ ಹಲವು ಹಂತಗಳು ಸ್ವಲ್ಪ ನೀರಸ ಮತದಾನ ಅಂದರೆ ತಪ್ಪಾಗಲಾರದು , ಮೊದಲ ಹಂತದ ಚುನಾವಣೆಯಲ್ಲಿ ತಮಿಳು ನಾಡು , ಕೇರಳ ಎಲ್ಲ ಕ್ಷೇತ್ರಗಳ ಅಭ್ಯರ್ಥಿಗಳ ಹಣೆಬರಹವನ್ನು ಈಗಾಗಲೇ ಮತದಾರ ನಿರ್ಧರಿಸಿದ್ದಾನೆ. ಕರ್ನಾಟಕದ ಮೊದಲ ಹಂತದ ಚುನಾವಣೆ ಏಪ್ರಿಲ್ 26 ರಂದು ನಡೆಯಿತು , ಕರ್ನಾಟಕದ ಹಳೆ ಮೈಸೂರು ಒಳಗೊಂಡ ಕ್ಷೇತ್ರಗಳಲ್ಲಿ ಚುನಾವಣೆ 26 ರಂದು ಮುಗಿದಿದೆ. ಬೆಂಗಳೂರಿನ ನಾಲ್ಕು ಕ್ಷೇತ್ರಗಳು ಅತ್ಯಂತ ಕುತೂಹಲಕಾರವಾಗಿದೆ.

ಎರಡನೆ ಹಂತದ ಉತ್ತರ ಕರ್ನಾಟಕದ ಚುನಾವಣೆ ಮೇ 6 ರಂದು ನಡೆಯಿತು. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರ magic ಯಾವ ರೀತಿ ನಡೆಯುತ್ತದೆ ಎಂದು ಕಾದು ನೋಡುವಂತಾಗಿದೆ , ಇದರ ನಡುವೆ ಶ್ರೀ ಅರವಿಂದ್ ಕೇಜ್ರಿವಾಲ್ ಅವರ ಬಂಧನ - ತಾತ್ಕಾಲಿಕ ಬಿಡುಗಡೆ , ಸ್ವಾತಿ ಮಲಿವಾಲ್ ಘಟನೆ ಇನ್ನು ಹೆಚ್ಚಿನ ಕುತೂಹಲ ವುಂಟುಮಾಡಿದೆ.

ಇಸ್ರಲ್ ಹಾಗು ಪ್ಯಾಲೆಸ್ಟೈನ್ ನಡುವೆ ನಡೆಯುತ್ತಿರುವ ಯುದ್ಧ ಈಗ ಅಮೆರಿಕಾದ ಕಾಲೇಜುಗಳಿಗೆ ಹಬ್ಬಿದೆ. ನವ ಪೀಳಿಗೆಯ ಕಾಲೇಜು ವಿದ್ಯಾರ್ಥಿಗಳ ಈ ಪ್ರಹಸನ ಯೂನಿವರ್ಸಿಟಿ ಆಫ್ ಕೊಲಂಬಿಯಾದಲ್ಲಿ ವಿಕೋಪಕ್ಕೆ ತಿರುಗಿದ್ದು , ನ್ಯೂಯೋರ್ಕ್ ಪೊಲೀಸ್ ಅವರ ಆಗಮನದಿಂದ ಪರಿಸ್ಥಿತಿ ತಿಳಿಗೆ ಬಂದಿದೆ. ಅಮೆರಿಕಾದ ಚುನಾವಣೆಯ ಮೇಲೆ ಯಾವ ಪ್ರಭಾವ ಬೀಳಬಹುದೆನ್ನುವುದನ್ನು ಕಾದು ನೋಡಬೇಕಾಗಿದೆ !!

ಕನ್ನಡದ ಹೆಸರಾಂತ ಹಾಸ್ಯ ನಟ, ನಿರ್ದೇಶಕ , ನಿರ್ಮಾಪಕ ಶ್ರೀ ದ್ವಾರಕೀಶ್ ಅವರ ನಿಧನದಿಂದ ಕನ್ನಡ ರಂಗ ಬಡವಾಗಿದೆ ಎಂದರೆ ತಪ್ಪಾಗಲಾರದು. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ.

**ಸಂಪಾದಕರ ತಂಡ**



**ಉಷಾ ಗಣಪತಿ**



**ಕೆ.ರಾಘವೇಂದ್ರ**



**ಪವಿತ್ರಾ ರಾಜೀವ್**



**ಚಂದ್ರ**



**ಗಾಯತ್ರಿ**

# ಅಧ್ಯಕ್ಷರ ಅಪೂರ್ವ ಅಂಕಣ

**ಬೃಂದಾವನ ಬಂಧು ಬಾಂಧವರೆಲ್ಲರಿಗೂ ನಮಸ್ಕಾರ.**

ಎಂದಿನಂತೆಯೇ, ತುಂಬಾ ಕಾರ್ಯಕ್ರಮಗಳನ್ನು ಆಯೋಜಿಸಿಲ್ಲವೇನೋ ಎನ್ನುವಂತೆ ಅನ್ನಿಸಿದರೂ, ವಿವರವಾಗಿ ಪಟ್ಟಿ ಮಾಡುವಾಗ, ನಮ್ಮ ಬೃಂದಾವನದಲ್ಲಿ ಎಲ್ಲರೂ ಹಲವಾರು ಕಾರ್ಯಕ್ರಮಗಳು, ಕೆಲವೊಂದು ಹೊಸ  ಕ್ಲಬ್/ ಗುಂಪುಗಳ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಡಿಸೆಂಬರ್ನಲ್ಲಿ ಸಾಮಾನ್ಯವಾಗಿ ನಡೆಯುವ ಮಕ್ಕಳೋತ್ಸವ/ ವಾರ್ಷಿಕೋತ್ಸವವು ಜನವರಿಯಲ್ಲಿ ಅದ್ದೂರಿಯಾಗಿ ನಡೆಯಿತು. ಎಂದಿನಂತೆ, ನಮ್ಮ ಸಂಸ್ಕೃತಿಯ ಭವಿಷ್ಯದ ಹರಿಕಾರರಾದ ನಮ್ಮ ಬೃಂದಾವನದ  ಮಕ್ಕಳು,  ತಮ್ಮ ಅದ್ಭುತ ಪ್ರತಿಭೆಗಳಿಂದ ಎಲ್ಲರಿಗೂ ಕನ್ನಡದ ರಸದೌತಣ ಉಣಬಡಿಸಿದರು. ಜೊತೆ ಜೊತೆಗೆ,  ದೊಡ್ಡವರು ಸಹ, ತಾವೇನು ಕಡಿಮೆಯಿಲ್ಲ ಅಂತ, ಪ್ರತಿಭಾ ಪ್ರದರ್ಶನ ನೀಡಿ ಮನಸೆಳೆದರು.

ಮಕ್ಕಳೋತ್ಸವದಂದು ಚಿಗುರಿದ ಮಕ್ಕಳ ಚದುರಂಗ ಆಟಗಾರರ ಗುಂಪು ಮೊದಲ ಬಾರಿಗೆ ಪ್ರಾರಂಭಿಸಿ, ಈ  ಆಟವನ್ನು ಕಲಿಯಲು ಮತ್ತು ಕರಗತ ಮಾಡಿಕೊಳ್ಳಲು ಯುವ ಮನಸ್ಸುಗಳಿಗೆ ವೇದಿಕೆಯನ್ನು ಒದಗಿಸಿದೆ. ಹಾಗೆಯೇ, ತೋಟಗಾರಿಕೆ, ಹಿತ್ತಲ ಗಿಡಗಳನ್ನು ಬೆಳೆಸಲು ಮಕ್ಕಳಲ್ಲಿ ಆಸಕ್ತಿ ಬೆಳೆಸುವ ಸಲುವಾಗಿ  ಬೃಂದಾವನ ಗಾರ್ಡನ್ಸ್-ಗುಂಪುಗಳನ್ನು ಪ್ರಾರಂಭಿಸಿದೆವು-ನಮ್ಮ ಗಾರ್ಡನ್ ಕ್ಲಬ್ ಅನ್ನು ವಿಶೇಷವಾಗಿ ಮಕ್ಕಳನ್ನು ಕೇಂದ್ರೀಕರಿಸಿ ವಿನ್ಯಾಸಗೊಳಿಸಲಾಗಿದೆ, ಅವರಿಗೆ ಪ್ರಕೃತಿಯ ಮಹತ್ವ ಮತ್ತು ತೋಟಗಾರಿಕೆಯ ಮೂಲಭೂತ ಅಂಶಗಳನ್ನು ಕಲಿಯಲು ಅನುಕೂಲ ಮಾಡಿಕೊಡುತ್ತಾ ಇದೆ.
ದೊಡ್ಡವರಿಗೆ  ಹೊಸದಾಗಿ ಏನಿದೆ ಅಂತೀರಾ? ಇತ್ತೀಚಿಗೆ ಶುರುವಾದ ನಮ್ಮ ಸಿನಿಮಾ ಕ್ಲಬ್ ಸಿನಿಮಾ ಉತ್ಸಾಹಿಗಳಿಗೆ ಕನ್ನಡ ಸಿನಿಮಾದ ಶ್ರೀಮಂತಿಕೆಯನ್ನು ಬೃಂದಾವನ ಟೆಂಟ್ ನಲ್ಲಿ ಅನ್ವೇಷಿಸಲು ಮತ್ತು ವಿಮರ್ಶಿಸಲು ಒಂದು ವೇದಿಕೆಯಾಗಿದೆ. ಮಹಿಳೆಯರಿಗಾಗಿ ಥ್ರೋ ಬಾಲ್ ತಂಡವೂ ಶುರುವಾಗಿದೆ .

ಕ್ಲಬ್ ಗಳ ಜೊತೆ ಜೊತೆಗೆ ಹಲವಾರು ಕಮ್ಯುನಿಟಿ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ ಮತ್ತು ಮುಂದೆಯೂ ಹಮ್ಮಿಕೊಂಡಿದ್ದೇವು.

ವ್ಯಾಲೆಂಟೈನ್ಸ್ ದಿನಾಚರಣೆ ಪ್ರಯುಕ್ತ ನಮ್ಮ ಬೃಂದಾವನ ಮಕ್ಕಳು, ಸೀನಿಯರ್ ಕಮ್ಯುನಿಟಿ ಮೆಂಬರ್ಸ್ ಗೆ, ತಾವೇ ರಚಿಸಿದ ಗ್ರೀಟಿಂಗ್ ಕಾರ್ಡ್ಗಳನ್ನು ನಾವು ತಲುಪಿಸಿದೆವು. ಈ ಸಂದರ್ಭದಲ್ಲಿ ಆ ವೃಧ್ಧರ ಮುಖದಲ್ಲಿ ಮೂಡಿದ ಮುಗುಳ್ನಗೆಗೆ ಬೆಲೆ ಕಟ್ಟೋಕ್ಕೆ ಆಗೋದಿಲ್ಲ. ನಮ್ಮ ಕಣ್ಣಂಚಲ್ಲಿ ಆನಂದ ಭಾಷ್ಪ ಮೂಡಿದ್ದು, ಮನಸ್ಸಿನಲ್ಲಿ  ಇನ್ನೂ ಹಸಿಯಾಗಿ ಹಸಿರಾಗಿದೆ.

2024ರ ಮಾರ್ಚ್ 8 ರಂದು ನ್ಯೂ ಜೆರ್ಸಿಯ “ಬೃಂದಾವನ ಕನ್ನಡ ಕೂಟ - ಅಪೂರ್ವ ತಂಡ”ದ ವತಿಯಿಂದ, “ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ” ಅಂಗವಾಗಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವು ಅಂತರಂಗದ ಮೂರನೇ ಕಣ್ಣನ್ನು ತೆರೆಸುವ ಪ್ರಯತ್ನವೇ ಎಂದು ಹೇಳಿದರೆ ತಪ್ಪಾಗಲಾರದು. ಕಾರ್ಯಕ್ರಮದ ವಿಶೇಷ ಆಹ್ವಾನಿತರು ಪದ್ಮಶ್ರೀ ಪುರಸ್ಕೃತ, ಶ್ರೀಮತಿ ಸುನಿತಾ ಕೃಷ್ಣನ್ ರವರು. Zoom ಮುಖೇನ ನಡೆದ ಈ ಕಾರ್ಯಕ್ರಮದಲ್ಲಿ, ಸುನೀತಾರವರ ಸಂದರ್ಶನವನ್ನು ಸುಂದರವಾಗಿ ನಡೆಸಿಕೊಟ್ಟರು.

ಇತ್ತೀಚಿಗೆ NYBC ಸಹಯೋಗದೊಂದಿಗೆ, ಶ್ರೀ ಸಾಯಿ ಬಾಲಾಜಿ ಮಂದಿರದಲ್ಲಿ ಮೊಟ್ಟಮೊದಲಬಾರಿಗೆ ಬೃಂದಾವನದಲ್ಲಿ ರಕ್ತದಾನ ಶಿಬಿರ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ನಮ್ಮ ಹಲವಾರು ಸದಸ್ಯರು ಅತ್ಯುತ್ಸಾಹದಿಂದ ಭಾಗವಹಿಸಿದ್ದು, ಗಮನಾರ್ಹ ಮತ್ತು ಪ್ರಶಂಸನೀಯ.

ಕನ್ನಡಕ್ಕಾಗಿ ಬೈಲಿಟರಸಿ ಸೀಲ್ ಅನ್ನು ಪರಿಚಯಿಸಿದ್ದು ನಮ್ಮ ಗಮನಾರ್ಹ ಸಾಧನೆಗಳಲ್ಲಿ ಒಂದಾಗಿದೆ. ಈ ಕಾರ್ಯಕ್ರಮವು ಪ್ರೌಢಶಾಲಾ ಪದವಿಯಿಂದ ಎರಡು ಅಥವಾ ಹೆಚ್ಚಿನ ಭಾಷೆಗಳಲ್ಲಿ, ವಿಶೇಷವಾಗಿ ಕನ್ನಡ ಅಧ್ಯಯನ ಮಾಡಿದ ಮತ್ತು ಪ್ರಾವೀಣ್ಯತೆಯನ್ನು ಪಡೆದ ವಿದ್ಯಾರ್ಥಿಗಳನ್ನು ಗುರುತಿಸುತ್ತದೆ. ಯುವ ಪೀಳಿಗೆಯಲ್ಲಿ ಕನ್ನಡ ಭಾಷೆಯನ್ನು ಉತ್ತೇಜಿಸುವ ನಮ್ಮ ಬದ್ಧತೆಗೆ ಇದು ಸಾಕ್ಷಿಯಾಗಿದೆ.

ಈ ಸಲ ನಮ್ಮ ಯುವ ಬೃಂದಾವನ ತಂಡ ಇನ್ನೂ ಹಲವಾರು "ಸ್ವಾಮಿ ಕಾರ್ಯ, ಸ್ವ-ಕಾರ್ಯ" ಎನ್ನುವಂತೆ, ಸ್ವಯಂ-ಸೇವೆಯಿಂದ, ನಮ್ಮ ಬೃಂದಾವನ ನೆಲೆಸಿರುವ ಈಸ್ಟ್ ವಿಂಡ್ಸರ್ ನ ಮೇಯರ್ ಜಾನಿಸ್ ಮಿರೋನೋವ್ ಅವರಿಂದ ಪ್ರೆಸಿಡೆನ್ಶಿಯಲ್ ವಾಲಂಟಿಯರ್ ಸರ್ವಿಸ್ (PVSAward), ಚಿನ್ನ, ಹಾಗೂ ಕಂಚಿನ ಪದಕ-ಪ್ರಶಸ್ತಿ ಸ್ವೀಕರಿಸಿದರು. ಈ ಸೇವಾ ಮನೋಭಾವವನ್ನು ಪ್ರೋತ್ಸಾಹಿಸಲು, ಇನ್ನೂ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಯೋಜನೆಯಿದೆ

ಏಪ್ರಿಲ್ ೨೦ ರಂದು ನಡೆದ ನಮ್ಮ ಬೃಂದಾವನ ವಸಂತೋತ್ಸವದಂದು, ಶ್ರೀ ಕ್ರೋಧಿ ನಾಮ ಶುಭ ಸಂವತ್ಸರದ, ಉತ್ತರಾಯಣ ವಸಂತ ಋತುವಿನ, ಚೈತ್ರ ಮಾಸದ ಶುಕ್ಲ ಪಕ್ಷ ದ್ವಾದಶಿಯ ಪಂಚಾಗ ಶ್ರವಣದೊಂದಿಗೆ ಪ್ರಾರಂಭಗೊಂಡ ಈ ಶುಭ ಸಮಾರಂಭದಂದು, ನಮ್ಮ ಬೃಂದಾವನದ ಸಕುಟುಂಬ ಸಪರಿವಾರ ಸಹೃದಯ ಸದಸ್ಯರೊಂದಿಗೆ ಖುಷಿ ಖುಷಿಯಿಂದ ಕಳೆದೆವು. ಈ ಹೊಸ ವರ್ಷದ ಚಾಂದ್ರಮಾನ ಯುಗಾದಿ ಹಾಗು ವಸಂತೋತ್ಸವವನ್ನು ಅದ್ದೂರಿಯಾಗಿ, ಅಪೂರ್ವವಾಗಿ ಆಚರಿಸಿದೆವು. ನಮ್ಮ ಅಪೂರ್ವ ವೇದಿಕೆಯಲ್ಲಿ ನಮ್ಮ ಕಸ್ತೂರಿ ಸಿರಿಗನ್ನಡದ ಪರಂಪರೆಯ ಶ್ರೀಮಂತಿಕೆಯನ್ನು ಪ್ರತಿಬಿಂಭಿಸುವ ಮತ್ತು ನಮ್ಮ ಬೃಂದಾವನಿಗರ ಪ್ರತಿಭೆಗಳನ್ನು ಪ್ರದರ್ಶಿಸುವ ಸಾಂಸ್ಕೃತಿಕ ಚಟುವಟಿಕೆಗಳ ಅತ್ಯಾಕರ್ಷಕ ಕಾರ್ಯಕ್ರಮಗಳನ್ನು ವೀಕ್ಷಿಸಿದೆವು. ಅಂದಿನ ಆಕರ್ಷಣೆ, ಕುಮಾರಿ\ಶ್ರೀಮತಿ ಅಂಜಲಿ ಶಾನಭಾಗ್ ಅವರ ಅಮೋಘ ಸ್ಯಾಕ್ಸೋಫೋನ್ ರಸಮಂಜರಿ, ತಮ್ಮ ಅದ್ಭುತ ಪ್ರದರ್ಶನದಿಂದ ಮಂತ್ರಮುಗ್ಧರಾಗಿಸಿದರು.

ಅಷ್ಟೇ ಅಲ್ಲ! ಒಳ್ಳೆಯ ಆಹಾರವಿಲ್ಲದೆ ಯಾವುದೇ ಆಚರಣೆ ಪೂರ್ಣಗೊಳ್ಳುವುದಿಲ್ಲ ಎಂದು ನಾವು ನಂಬುತ್ತೇವೆ. ಎಲ್ಲರಿಗೂ ರುಚಿಕರವಾದ ನಮ್ಮ ಸಂಪ್ರದಾಯದ ಊಟದ ವ್ಯವಸ್ಥೆ ಮಾಡಿದ್ದೇವೆ. ಈ ಊಟವು ನಿಮ್ಮ ಹಸಿವನ್ನು ನೀಗಿಸುವುದು ಮಾತ್ರವಲ್ಲದೆ ಜೊತೆ ಜೊತೆಯಲ್ಲಿ ಮಾತಾಡುತ್ತ, ಹರಟೆ ಹೊಡೆಯುತ್ತಾ ಮಾಡೋ ಈ ಊಟ ನಮಗೆಲ್ಲರಿಗೂ ಶಾಶ್ವತವಾದ ನೆನಪುಗಳನ್ನು ಸೃಷ್ಟಿಸಲು ಅವಕಾಶವನ್ನು ಒದಗಿಸಿದೆ ಎಂದು ನಾವು ಭಾವಿಸುತ್ತೇವೆ.

ನಾವು ಹಬ್ಬಗಳಲ್ಲಿ ಮುಳುಗಿರುವಾಗ, ನಮ್ಮ ಪ್ರಕೃತಿ, ಸಂಸ್ಕೃತಿಯ ಸೌಂದರ್ಯ, ನಮ್ಮ ಸಮುದಾಯದ ಶಕ್ತಿ ಮತ್ತು ಒಟ್ಟಿಗೆ ಸೇರುವ ಸಂತೋಷವನ್ನು ಪ್ರಶಂಸಿಸಲು ಸ್ವಲ್ಪ ಸಮಯ ತೆಗೆದುಕೊಳ್ಳೋಣ. ನಿಮಗೆಲ್ಲ ತಿಳಿದಿರುವಂತೆ, ಈ ಬೃಂದಾವನ ಕನ್ನಡ ಕೂಟ ಸೃಷ್ಟಿಯಾಗಿದ್ದು, ನಿಮ್ಮಿಂದ ಮತ್ತು ಕೇವಲ ನಿಮಗೋಸ್ಕರ. ನೀವಿಲ್ಲದೆ, ನಾವು, ಅಂದರೆ ಬೃಂದಾವನ ಅಪೂರ್ಣ! ಪ್ರತಿವರ್ಷ ನಿಮ್ಮ ಸಹಕಾರ ನಿಮ್ಮ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ. ನಮ್ಮೆಲ್ಲ ಕಾರ್ಯಕ್ರಮಗಳಿಗೆ ನೀವೂ ಸದಾ ಬರ್ತಾ ಇರಿ ಮತ್ತು ನಿಮ್ಮ ಇನ್ನಿತರ ಕನ್ನಡ ಕುಟುಂಬದವರನ್ನೂ ನಮ್ಮ ಬೃಂದಾವನಕ್ಕೆ ಕರೆತನ್ನಿ. ಯಾಕೆ ಅಂದ್ರೆ ನೀವು ನಿಮ್ಮ ಸ್ನೇಹಿತರ ಜೊತೆ ಇಲ್ಲಿಗೆ ಬಂದು, ಇತರರೊಂದಿಗೆ ಸ್ನೇಹ ಬಾಂಧವ್ಯ ಬೆಸೆದಾಗಲೇ ನಮ್ಮ ಬೃಂದಾವನದ ಬೇರುಗಳು ಸಧೃಡವಾಗುತ್ತದೆ. ಸುಮಧುರ ಸ್ನೇಹ ಸಮ್ಮಿಲನ, ನಮ್ಮ ನಿಮ್ಮೀ ಬೃಂದಾವನವಾಗುತ್ತದೆ ಎನ್ನುತ್ತಾ.



**ಅರ್ಚನಾ ಆಚಾರ್ಯ**
**ಅಧ್ಯಕ್ಷರು, ಅಪೂರ್ವ ತಂಡ, ಬೃಂದಾವನ, ನ್ಯೂ ಜೆರ್ಸಿ.**

# ಅರ್ಹತೆ



**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

ನಮ್ಮನ್ನವರು ಸರಿಯಾಗಿ ಗುರುತಿಸಲಿಲ್ಲ, ನಮಗಲ್ಲಿ ಸೂಕ್ತವಾದ ಸ್ಥಾನಮಾನ ಸಿಗಲಿಲ್ಲ, ಇವರು ಸರಿಯಾಗಿ ಮಾತನಾಡಿಸಲಿಲ್ಲ, ಅವರು ಗೌರವಿಸಲಿಲ್ಲ ಎಂದು ದೂಷಿಸುವವರು ನಮಗೆ ಎಲ್ಲೆಲ್ಲೂ ಸಿಗುತ್ತಾರೆ. ಆದರೆ ತಮ್ಮ ಅರ್ಹತೆಯನ್ನು ಮೀರಿದ ಗೌರವವನ್ನು ಪ್ರಾಮಾಣಿಕತೆಯಿಂದ ನಯವಾಗಿ ನಿರಾಕರಿಸುವವರು ಸಿಗುವುದು ಮಾತ್ರ ಅತ್ಯಂತ ಅಪರೂಪ.

ಲೋಕದಲ್ಲೀಗ ಬಹಳಮಂದಿಗೆ ಬಿರುದು ಬಾವಲಿಗಳು ಬೇಕು, ಪರಾಕು ಹೇಳುವವರು ಬೇಕು. ತಮಗೆ ಆ ಯೋಗ್ಯತೆ ಇದೆಯೇ ಎಂಬ ಪ್ರಾಮಾಣಿಕ ಚಿಂತನೆ ಮಾತ್ರ ಅವರ ಮನಸ್ಸಿನೊಳಗೆ ನುಸುಳುವುದೇ ಇಲ್ಲ. ಮತ್ತು ತಾವು ನಿರೀಕ್ಷಿಸುವ ಮನ್ನಣೆಗನುಗುಣವಾದ ಸಾಧನೆಯನ್ನು ಮಾಡಲು, ಕಷ್ಟಪಡಲು ಅವರಿಗೆ ಮನಸ್ಸಾಗುವುದೂ ಇಲ್ಲ. ಪುಣ್ಯದ ಫಲಬೇಕು, ಪುಣ್ಯಸಂಪಾದನೆಯ ಪರಿಶ್ರಮ ಬೇಡ 'ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ' ಸಂಬಳ ಕೊಡಿ, ಆದರೆ ಕೆಲಸ ಮಾತ್ರ ಹೇಳಬೇಡಿ ಎನ್ನುವ ಮನಃಸ್ಥಿತಿ.

'ಸರ್ವಃ ಕಾಂತಮಾತ್ಮೀಯಂ ಪಶ್ಯತಿ' ಎಂದು ಕಾಳಿದಾಸನೆನ್ನುವಂತೆ ಅವರವರ ಮನಸ್ಸಿನಲ್ಲಿ ಅವರವರ ಬಗ್ಗೆ ಹೆಚ್ಚುಗಾರಿಕೆಯ ಅಭಿಪ್ರಾಯವಿರುವುದು ಸಹಜ. ತಮ್ಮದೆನ್ನುವ ವಸ್ತುಗಳು, ವ್ಯವಸ್ಥೆಗಳು ಮತ್ತು ಸಾಧನೆಗಳ ಬಗ್ಗೆ ಪ್ರತಿಯೊಬ್ಬನಿಗೂ ಅಭಿಮಾನವಿರಬೇಕು. ಆದರೆ ಅದು ಅತಿಯಾಗಬಾರದು. ನ್ಯಾಯಯುತವಾಗಿರಬೇಕು ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿರಬೇಕು. ತಮಗಿಂತಲೂ ಉತ್ತಮ ಯೋಗ್ಯತೆ, ವಿದ್ಯೆ, ಕೌಶಲ ಮತ್ತು ಸಾಧನೆಯುಳ್ಳವರನ್ನು ಗೌರವಿಸುವ ಮನೋವೈಶಾಲ್ಯವಿರಬೇಕು. ಅವರಿಗೆ ಸಿಗುವ ಗೌರವ, ಅರ್ಹತೆಯಿರದಿದ್ದರೂ ತನಗೆ ಸಿಗಬೇಕೆಂಬ ದುರಾಗ್ರಹವಿರಬಾರದು.

ಕೆಲವೊಮ್ಮೆ ಕೆಲವೊಂದು ಸ್ಥಾನಮಾನಗಳು ಕೆಲವರನ್ನು ಅದೃಷ್ಟವಶಾತ್ ಅರಸಿಕೊಂಡು ಬರುತ್ತವೆ. ದೊಡ್ಡ ದೊಡ್ಡ ನಾಯಕರ, ರಾಜಕಾರಣಿಗಳ ಮಕ್ಕಳೋ, ಅಣ್ಣತಮ್ಮಂದಿರೋ ಆಗಿ ಹುಟ್ಟಿದವರಂತೆ. ಆದರೆ ಆ ಪದವಿಗನುಗುಣವಾದ ಅರ್ಹತೆ ಅವರಲ್ಲಿಲ್ಲವೆಂದರೆ ಅವರು ಜನಾನುರಾಗಿಗಳಾಗಲು ಸಾಧ್ಯವಿಲ್ಲ. ಯಾವ ಸಾಧನೆಯನ್ನೂ ಮಾಡದೆ ಗೌರವವನ್ನು ಹೊಂದುವುದೆಂದರೆ ಯಾವತ್ತಿಗೂ ಅಸಂಭವನೀಯ. ಹಾಗೆಯೇ ಕೆಲಮಂದಿ ಅವಕಾಶವಾದಿ ದುಷ್ಟರು ಅವರನ್ನು ಇನ್ನಿಲ್ಲದಂತೆ ಎತ್ತಿಕಟ್ಟಿ ತಮ್ಮ ಬೇಳೆಬೇಯಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಮುಂದೆ ಈ ಮೂರ್ಖತನವೇ ಅವರ ದಯನೀಯ ಅವನತಿಗೆ ಕಾರಣವಾಗುತ್ತದೆ. ದುಷ್ಟರ ಸಂಗದಿಂದ ಉದ್ಧಾರವಾದವರು ಇತಿಹಾಸದಲ್ಲೇ ಇಲ್ಲ.



ಮನಸ್ಸು ಎಲ್ಲವನ್ನೂ ಬಯಸುತ್ತದೆ. ಅದಿರುವುದೇ ಹಾಗೇ. ಹುಲ್ಲೋ, ಹೂವಿನಗಿಡವೋ ಎಂಬುವುದನ್ನು ನೋಡದೆ ಸಿಕ್ಕ ಸಿಕ್ಕಲ್ಲಿ ಬಾಯಿ ಹಾಕುವ ಹಸುವಿನಂತೆ. ಬುದ್ಧಿ ಮನಸ್ಸನ್ನು ಕಾಯುತ್ತಿರಬೇಕು. ಸರಿದಾರಿಯಲ್ಲಿ ಕರೆದುಕೊಂಡು ಹೋಗಬೇಕು. ಹಸುವನ್ನು ಕಾಯುವ ಗೋಪಾಲಕನಂತೆ. ಹಸು ಹುಲ್ಲು ಮೇಯುವುದನ್ನು ಬಿಟ್ಟು, ಕಷ್ಟ ಪಟ್ಟು ಬೆಳೆಸಿದ ಅಪರೂಪದ ಹೂಗಿಡಗಳಿಗೆ ಬಾಯಿ ಹಾಕಿತೆಂದರೆ ಹಸುವಿನ ಜೊತೆಗೆ ಗೋಪಾಲಕನಿಗೂ ಛಡಿಯೇಟು ಬಿದ್ದೀತು! ಹಾಗೆಯೇ ತನಗೆ ಯೋಗ್ಯವಲ್ಲದ್ದನ್ನು ಹಂಬಲಿಸುವ ಮನಸ್ಸನ್ನು ನಮ್ಮ ಬುದ್ಧಿಯೇ ನಿಗ್ರಹಿಸಬೇಕು. ಇಲ್ಲವಾದರೆ ಮುಂದೆಂದೂ ಮರೆಯಲಾರದ ಪಾಠವನ್ನು ಕಲಿಯಬೇಕಾದೀತು! ಶಾಶ್ವತವಾದ ದುಃಖವನ್ನು ಅನುಭವಿಸಬೇಕಾದೀತು! ಒಂದು ಬೆಕ್ಕಿಗೆ ಹೊಟ್ಟೆ ತುಂಬಿಸುವ ಯೋಗ್ಯತೆಯಿಲ್ಲದವ ತನ್ನ ಮನೆಯೊಳಗೆ ಹುಲಿಯೊಂದನ್ನು ತಂದು ಸಾಕಲು ಯತ್ನಿಸಿದರೆ ಏನಾಗಬಹುದು?

ಆದ್ದರಿಂದ ನಮ್ಮ ಅರ್ಹತೆಯನ್ನು ಮೀರಿದ ಗೌರವವನ್ನು, ಸುಖವನ್ನು ನಾವು ಯಾವತ್ತಿಗೂ ಹಂಬಲಿಸಬಾರದು. ಒಂದು ವೇಳೆ ಅದಾಗಿಯೇ ನಮ್ಮ ಬಳಿ ಬಂದರೂ, ನಯವಾಗಿ ಅದನ್ನು ನಿರಾಕರಿಸಿ ನಾವೇ ದೂರಸರಿಯಬೇಕು.




KARNATAKA CULTURAL ORGANIZATION BRINDAVANA (KCOB) NJ, USA
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



# ಅಪೂರ್ವ ವಸಂತಪರ್ವ

**ಸತ್ಯನಾರಾಯಣ್ ಕೃಷ್ಣಮೂರ್ತಿ (ಸತ್ಯ), ನ್ಯೂಜೆರ್ಸಿ**

ಈ ಚೈತ್ರ ಮಾಸ ಅನ್ನೋದೇ ಹೀಗೆ! ಪ್ರತಿ ವರ್ಷವೂ ನಮ್ಮಲ್ಲಿ ಒಂದು ಹೊಸ ಭರವಸೆಯನ್ನು ಹುಟ್ಟು ಹಾಕುತ್ತದೆ. ವಸಂತ ಋತುವಿನ ಆಗಮನದ ಈ ಸಮಯದಲ್ಲಿ ನಮಗೆ ಗೊತ್ತಿಲ್ಲದೆಯೇ ಒಂಥರಾ ಉಲ್ಲಾಸ, ಚೈತನ್ಯಭರಿತ ಉತ್ಸಾಹ ನಮ್ಮಲ್ಲಿ ನವಿರೇಳತ್ತೆ. ಚುಮು-ಚುಮು ಚಳಿ ಟಾಟಾ ಬೈ ಬೈ ಎಂದು ಹೇಳಿ ಹೋಗ್ತಾ ಇರೋ ಹಾಗೆಯೇ, ಹಾಯ್ ಎಂದು ಸೂರ್ಯರಶ್ಮಿಗಳು ನಮ್ಮನ್ನು ಸ್ಪರ್ಶಿಸಿ ಹಾಯೆನಿಸುವ ಬೆಚ್ಚನೆಯ ಅನುಭೂತಿಯನ್ನು ನೀಡುತ್ತವೆ. ಈಗತಾನೇ ದೀರ್ಘ ನಿದ್ದೆಯಿಂದ, ಮೈಕೊಡವಿಕೊಂಡು ಮೇಲೇಳುತ್ತಿರುವಂತೆ, ಕಣ್ಣಿಗೆ ತಂಪೆರೆಯುವ ಗಿಡ-ಮರಗಳ ಚಿಗುರನ್ನು ನೋಡುವಾಗ, ಸುಂಯ್ ಎಂದು ಮುಖದ ಮೇಲೆ ಬೀಸುವ ತಂಗಾಳಿಯನ್ನು ಆಘ್ರಾಣಿಸಿದಾಗ, ಹಕ್ಕಿಗಳ ಇಂಪಾದ ಚಿಲಿಪಿಲಿ ಸಂಗೀತವನ್ನು ಕೇಳುವಾಗ, ಮನಸ್ಸಿಗೆ ಆಗುವ ಮುದವನ್ನು ವರ್ಣಿಸುವುದಕ್ಕಾದರೂ ಹೇಗೆ ಸಾಧ್ಯ ಹೇಳಿ? ಈ ಚಿತ್ರಣವನ್ನು ಒಮ್ಮೆ ಕಣ್ಮುಂದೆ ತಂದುಕೊಳ್ಳಿ, ಆಗ ನಿಮಗೇ ತಿಳಿಯದಂತೆ ನಿಮ್ಮ ಮುಖದ ಮೇಲೆ ಮಂದಹಾಸ ಮೂಡುವುದು ಸತ್ಯ. ಈ ವರ್ಣನಾತೀತ ಅನುಭವವನ್ನು ಬಂಧು-ಬಳಗದೊಂದಿಗೆ ಸೇರಿ ಸಂತೋಷದಿಂದ ಅನುಭವಿಸುವುದಕ್ಕೆಂದೇ ಏನೋ ನಮ್ಮ ಪೂರ್ವಜರು, ಹೊಸವರ್ಷವನ್ನು, ಯುಗಾದಿಯಿಂದ ಆರಂಭಿಸುತ್ತಾ ಬಂದಿರುವುದು. ಈ ಅಸಾಧಾರಣ ಪ್ರಾಕೃತಿಕ ಚಮತ್ಕಾರಗಳು, ನಮ್ಮಲ್ಲಿ ಹೊಸ-ಹೊಸ ಕನಸು, ಭರವಸೆ, ಯೋಜನೆಗಳಿಗೆ ಜನ್ಮ ನೀಡುತ್ತವೆ. ಇವನ್ನು ಸಾಕಾರಗೊಳಿಸಲು ಪ್ರಯತ್ನಿಸುವಂತೆ ಪ್ರೇರೇಪಿಸುತ್ತವೆ.



ಈ ಬಾರಿಯ ಹೊಸ ವರ್ಷವನ್ನು, ಹೊಸ ಹರ್ಷದಿಂದ ನಮ್ಮ - ನಮ್ಮ ಮನೆಗಳಲ್ಲಿ ಮಾತ್ರವಲ್ಲದೇ, ಸಪ್ತ ಸಾಗರದಾಚೆಯ ನಮ್ಮ ವಿಸ್ತೃತ ಕುಟುಂಬ ಅಂದರೆ, ಅಮೇರಿಕಾದ ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟದಲ್ಲೂ ಬಹಳ ವಿಜೃಂಭಣೆಯಿಂದ ಸ್ವಾಗತಿಸಿದೆವು ಮತ್ತು ಆಚರಿಸಿದೆವು. ಬೃಂದಾವನದ ಅಪೂರ್ವ ತಂಡವು 2024ರ ವಸಂತೋತ್ಸವವನ್ನು ಏಪ್ರಿಲ್ 20 ರಂದು, ನ್ಯೂ ಜೆರ್ಸಿಯ ಈಸ್ಟ್ ವಿಂಡ್ಸರ್ ನಗರದ ಮೆಲ್ವಿನ್ ಕ್ರೆಪ್ಸ್ ಮಿಡ್ಲ್ ಸ್ಕೂಲ್‌ನಲ್ಲಿ ಆಯೋಜಿಸಿತ್ತು. ಎಂದಿನಂತೆ ಹಲವಾರು ವಿಶಿಷ್ಟವಾದ ಸಾಂಸ್ಕೃತಿಕ ಪ್ರದರ್ಶನಗಳನ್ನು ಉಣಬಡಿಸುವ ಮೂಲಕ ಅಪೂರ್ವ ತಂಡ, ಎಲ್ಲರ ಮೆಚ್ಚುಗೆಯನ್ನು ಪಡೆಯಿತು.

ವಿಘ್ನ ನಿವಾರಕನಾದ ಗಣೇಶಸ್ತುತಿಯಿಂದ ಈ ಉತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಿದ ನಂತರ, ಅಪೂರ್ವ ತಂಡದ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರು, ತಮ್ಮ ವಿಶೇಷ ಶೈಲಿಯಲ್ಲಿ ಎಲ್ಲರನ್ನೂ ಬಹಳ ಉತ್ಸಾಹದಿಂದ ಸ್ವಾಗತಿಸುತ್ತಾ ಅಂದಿನ ದಿನದ ಕಾರ್ಯಕ್ರಮಗಳ ಪಕ್ಷಿ ನೋಟವನ್ನು ನೀಡಿದರು. ಬೃಂದಾವನ ಸಂಕೇತ ಗೀತೆಯಾದ, "ಕನ್ನಡದ ಕುಲದೇವಿ ಕಾಪಾಡು ಬಾ ತಾಯಿ" ಮತ್ತು ಭಾರತ ಹಾಗು ಅಮೇರಿಕಾದ ರಾಷ್ಟ್ರಗೀತೆಯನ್ನು ಚಿಣ್ಣರು ಮತ್ತು ಕೂಟದ ಸದಸ್ಯರು ಕೂಡಿ ಹಾಡಿದ ನಂತರ, ಇಡೀ ದಿನದ ನಿರೂಪಣೆಯ ಜವಾಬ್ದಾರಿಯನ್ನು ವಿಡಿಯೋ ಬ್ಲಾಗರ್ ಆದ ಶ್ರೀಮತಿ ದೇವಿಕಾ ಮತ್ತು ಶ್ರೀಮತಿ ಅಶ್ವಿನಿ ಯವರಿಗೆ ಹಸ್ತಾಂತರಿಸಲಾಯಿತು.

ಯುಗಾದಿ ಬಂತೆಂದರೆ ಎಲ್ಲರಲ್ಲೂ ಹೊಸ ವರ್ಷದ ಸಂಭ್ರಮದ ಜೊತೆಗೆ ನೂತನ ವರ್ಷದಲ್ಲಿ ದೇಶದ ಭವಿಷ್ಯ, ರಾಶಿ-ಫಲದ ಮುಖಾಂತರ ತಮ್ಮ ವರ್ಷ ಭವಿಷ್ಯ ತಿಳಿದುಕೊಳ್ಳುವ ಕಾತುರ ಸರ್ವೇ ಸಾಮಾನ್ಯವಾಗಿರುತ್ತದೆ. ಈ ಕುತೂಹಲವನ್ನು ಪಂಚಾಗ ಶ್ರವಣದ ಮೂಲಕ ನಿವಾರಿಸಿಕೊಳ್ಳುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಪ್ರತಿ ವಸಂತೋತ್ಸವದಂತೆ, ಈ ಸಲವೂ ಶ್ರೀ ಕೃಷ್ಣ ವೃಂದಾವನದ ಗುರುಗಳಾದ ಶ್ರೀ ಯೋಗಿಂದ್ರ ಭಟ್ಟರ ಶಿಷ್ಯರಾದ ಶ್ರೀ ಪ್ರಹ್ಲಾದ್, ತಮ್ಮ ಗುರುಗಳ ಆಶೀರ್ವಚನವನ್ನು ತಿಳಿಸಿಕೊಡುತ್ತಾ ಪಂಚಾಂಗ ಶ್ರವಣವನ್ನು ಅಚ್ಚುಕಟ್ಟಾಗಿ ನೆರೆದಿದ್ದ ಬೃಂದಾವನಿಗರಿಗೆ ವಾಚಿಸಿದರು.




ತಮ್ಮ ಅಪೂರ್ವ ಕಂಠದಿಂದ ಪ್ರೇಕ್ಷಕರನ್ನು ಮಾತ್ರವಲ್ಲದೆ, ವಸಂತರಾಜನನ್ನೂ ಹಿಡಿದಿಟ್ಟುಕೊಂಡು ಹೃನ್ಮನಗಳಿಗೆ ಇಂಪೆರೆದಿದ್ದು, ಶ್ರೀಮತಿ ಶ್ರೀವಿದ್ಯಾ ಪ್ರಶಾಂತ್ ಅವರ ತಂಡ. ಮನೋಲ್ಲಾಸ ಮೂಡಿಸುವ ಕನ್ನಡ ಕವಿವರ್ಯ ಶ್ರೀ ಚೆನ್ನವೀರ ಕಣವಿಯವರ ಕವನ ಸಂಕಲನಗಳ ಆಯ್ದ ಕವನಗಳನ್ನು ಸುಮಧುರವಾಗಿ ಹಾಡಿ ಆ ದಿನದ ಸಾಂಸ್ಕೃತಿಕ ಪ್ರದರ್ಶನಗಳಿಗೆ ನಾಂದಿ ಹಾಡಿದರು.



ನಂತರ ವೇದಿಕೆಗೆ ಆಗಮಿಸಿದ ಸೌತ್ ಬ್ರನ್ಸ್‌ವಿಕ್ ಕನ್ನಡ ಶಾಲಾ ಮಕ್ಕಳು "ಚೆನ್ನಪ್ಪನ ಚಿಂಗಾರಿಗಳು" ಶೀರ್ಷಿಕೆಯಡಿಯಲ್ಲಿ, "ಚನ್ನಪ್ಪ ಚೆನ್ನೇಗೌಡ" ನಂತಹ ಜನಪ್ರಿಯ ಕನ್ನಡ ಜಾನಪದ ಗೀತೆಗಳಿಗೆ ಲೀಲಾಜಾಲವಾಗಿ ಹೆಜ್ಜೆ ಹಾಕುತ್ತಾ ಪ್ರೇಕ್ಷಕರನ್ನು ಆಕರ್ಷಿಸಿದರು. ಬೃಂದಾವನದ ನಾಟ್ಯ ಪ್ರವೀಣೆ, ಶ್ರೀಮತಿ ಅಮೃತಾ ಅವರ ನಿರ್ದೇಶನದಲ್ಲಿ ಈ ಮಕ್ಕಳು ವೃತ್ತಿಪರ ಕಲಾವಿದರಂತೆ ನರ್ತಿಸಿ ಸಭಾಂಗಣದಲ್ಲಿದ್ದವರೆಲ್ಲರ ಮನಸೂರೆಗೊಂಡರು



ಸತೀಶ ಹೊಸನಗರ, ಶಿವಲೀಲಾ ಜಾಡರ, ಪ್ರಶಾಂತ್ ಮುರುಗೇಂದ್ರಪ್ಪ, ಶೈಲೇಶ್ ಉಪ್ಪಿನ ಮತ್ತು ಇತರ ಸ್ಥಳೀಯ ಪ್ರತಿಭೆಗಳನ್ನೊಳಗೊಂಡ ತಂಡ "ತೇರ ಏರಿ ಅಂಬರದಾಗೆ, ನೇಸರ ಬರುತನೇ", "ಕ್ವಾಟ್ಲೆ ಸತೀಶ" ಮುಂತಾದ ಹಲವಾರು ಚಲನಚಿತ್ರ ಗೀತೆಗಳನ್ನು ವಿಶಿಷ್ಟ ರೀತಿಯಲ್ಲಿ ಹಾಡಿ, ಪ್ರೇಕ್ಷಕರು ಕೇಕೆ ಹಾಕಿ ಶಿಳ್ಳೆ ಹೊಡೆಯುವಂತೆ ಮಾಡಿದರು.  ಅಮೃತ, ಉಮಾ, ಸ್ನೇಹಾ, ಮುಂತಾದ ಕನ್ನಡದ ಸೂಪರ್ ಹಿಟ್ ಹಾಡುಗಳ ಅದ್ಭುತ ಗಾಯನಕ್ಕೆ ಶಿಳ್ಳೆ, ಚಪ್ಪಾಳೆಗಳ ಸುರಿಮಳೆಗೈದರು. ರಘು, ಸೌಮ್ಯ ಮತ್ತು ಇತರರು ತಮ್ಮ "ಸ್ವಾತಿ ಮುತ್ತಿನ ಮಳೆಹನಿಯೇ" ನೃತ್ಯ ಪ್ರದರ್ಶನದ ಮೂಲಕ ನಮ್ಮೆಲ್ಲರಿಗೂ ರೋಚಕ ರೋಮಾಂಚನ ಅನುಭವವನ್ನು ನೀಡಿದರು.

ಬೃಂದಾವನ ಕನ್ನಡ ಕಲಿಸೋಣ ಶಾಲೆಗಳು ಅಭಿಯಾನದ ಅಡಿಯಲ್ಲಿ ನ್ಯೂ ಜೆರ್ಸಿಯ ವಿವಿಧ ನಗರ\ಬಡಾವಣೆಗಳಲ್ಲಿ 7 ಕನ್ನಡ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ 220ಕ್ಕೂ ಹೆಚ್ಚು ಮಕ್ಕಳು ಕನ್ನಡವನ್ನು ಕಲಿಯುತ್ತಿದ್ದಾರೆ. ಅವರ ಕನ್ನಡ ಕಲಿಕೆಯ ವೇಗವರ್ಧನೆಗೆ ವಸಂತೋತ್ಸವದಂತಹ ಸಾಂಸ್ಕೃತಿಕ ಉತ್ಸವಗಳು ಪೂರಕವಾಗಿವೆ. ಇದಕ್ಕೆ ಉದಾಹರಣೆ ಅಂದು, ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ಮಕ್ಕಳು ತಮ್ಮ ಅದ್ಭುತ ಅಭಿನಯದಿಂದ ಪ್ರಸ್ತುತ ಪಡಿಸಿದ ನಾಟಕ, "ಹಿಡಿಂಬನ ತೋಟ". ಮಕ್ಕಳ ನಾಟಕಗಳ ರಚನೆಗೆ ಪ್ರಖ್ಯಾತರಾಗಿರುವ ಶ್ರೀ ಶ್ರೀನಿವಾಸ ಉಡುಪರ ಈ ನಾಟಕವನ್ನು ನಿರ್ದೇಶಿಸಿದ್ದು, "ಅಭಿನವ ಸಂಜಯ್ ಲೀಲಾ ಬನ್ಸಾಲಿ" ಎಂದೇ ಬೃಂದಾವನದಲ್ಲಿ ಚಿರಪರಿಚಿತರಾಗಿರುವ, ಶ್ರೀಮತಿ ಉಮಾ ಮೂರ್ತಿ. ಕನ್ನಡದ ಸಂಭಾಷಣೆಯನ್ನು ಸುಲಲಿತವಾಗಿ ಮಾತನಾಡುತ್ತ ಅಭಿನಯವನ್ನು ನೀಡುವ ಸರದಿ ವೇದಿಕೆಯ ಮೇಲಿನ ಈ ಮಕ್ಕಳದ್ದಾದರೆ, "ನಾಟಕದಲ್ಲಿ ನಾಟಕ"ವನ್ನು ನೋಡುವ ಸದವಕಾಶದ ಸರದಿ ಬೃಂದಾವನಿಗರದ್ದಾಗಿತ್ತು. ನವರಸಗಳನ್ನೂ ಒಳಗೊಂಡ ಈ ಕಥಾ ವಸ್ತು ಕೇವಲ ಮನರಂಜನೆಯನ್ನು ನೀಡಿದ್ದು ಮಾತ್ರವಲ್ಲದೇ, ಮಾನವ ಮತ್ತು ಪ್ರಕೃತಿಯ ನಡುವಿನ ಸೂಕ್ಷ್ಮ ಸಂಬಂಧವನ್ನು ಎತ್ತಿ ತೋರಿಸಿತ್ತು. ಪೂರಕವಾದ ಸಂಗೀತ ಅರ್ಚನಾ ಆಚಾರ್ಯ ಮತ್ತು ಉಮಾ ಮೂರ್ತಿಯವರು ಸಂಯೋಜಿಸಿದರೆ, ನೃತ್ಯ ಸಂಯೋಜನೆಯನ್ನು ಅಮೃತಾ ರಮೇಶ್ ಹಾಗು ವರ್ಷಾ ಜಯರಾಮ್ ಅವರು ನೀಡಿದ್ದರು,  ಅತ್ಯಾಕರ್ಷಕ ರಂಗಸಜ್ಜಿಕೆಯನ್ನು ರಾಜೇಶ್ ಆಚಾರ್ಯ ವಹಿಸಿಕೊಂಡು ಇಡೀ ನಾಟಕದ ಮೆರುಗನ್ನು ಹೆಚ್ಚಿಸಿದ್ದರು.

ಕನ್ನಡದ ಹೆಸರಾಂತ ಹಾಸ್ಯ ಕಲಾವಿದ ಹಾಗು ಸಾಹಿತಿ ಎಂ.ಎಸ್.ನರಸಿಂಹ ಮೂರ್ತಿ ಅವರು ರಚಿಸಿ, ಅಜಯ್ ಪ್ರೀತಂ ನಿರ್ದೇಶಿಸಿದ "ಕಿವುಡು ಸಾರ್ ಕಿವುಡು" ನಾಟಕ ಇಡೀ ಸಭಾಂಗಣವನ್ನು ನಗೆ ಹೊನಲಿನಲ್ಲಿ ತೇಲಾಡಿಸಿತ್ತು. ಪ್ರಸನ್ನ, ವಿವೇಕ್, ಶ್ರೀಧರ್ ಬಾಣಾವರ, ರತ್ನಾ, ರಾಗಿಣಿ ಮತ್ತು ರಶ್ಮಿಯವರ ಉಲ್ಲಾಸಭರಿತ ಹಾಸ್ಯ ಅಭಿನಯವು, ವಿಶೇಷವಾಗಿ 1980 ಮತ್ತು 1990ರ ದಶಕಗಳಲ್ಲಿ ಅಮೇರಿಕ ದೇಶಕ್ಕೆ ವಲಸೆ ಬಂದ ಬೃಂದಾವನಿಗರಿಗೆ ಸವಿ ಸವಿಯಾದ ಸಾವಿರ ನೆನಪುಗಳನ್ನು ಮೆಲುಕುಹಾಕುವಂತೆ ಮಾಡಿದ್ದಂತೂ ನಿಜ ಎಂದರೆ ತಪ್ಪಾಗಲಾರದು. ಸರ್ಕಾರಿ ಕೆಲಸವೆಂದರೆ ದೇವರ ಕೆಲಸ, ಅದನ್ನು ದೇವರೇ ಧರೆಗಿಳಿದು ಬಂದು ಮಾಡುವವರೆಗೂ ನಾವೇಕೆ ಮಾಡಬೇಕೆಂಬ ಅಂದಿನ ದಿನಗಳ ಸರ್ಕಾರಿ ನೌಕರರ ಮತ್ತು ನೌಕರಿಯ ವಿಡಂಬನಾತ್ಮಕ ವಸ್ತುವನ್ನು ತಿಳಿಹಾಸ್ಯದ ಮೂಲಕ ಪ್ರದರ್ಶನ ನೀಡಿದ ರೀತಿ, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.



ಕಲೆ ಎಂಬುದು, ಒಂದು ಭಾಷೆಯ ಎಲ್ಲೆಗೂ ಮೀರಿರುವಂತದ್ದು. ಈ ಮಾತಿಗೆ ಉದಾಹರಣೆ ಎಂಬಂತೆ ಅಂದಿನ ಕನ್ನಡ ಕಾರ್ಯಕ್ರಮಗಳನ್ನು ಆಸ್ವಾಧಿಸಿ ಪ್ರಶಂಸೆ ನೀಡಿದವರು, ಕನ್ನಡ ಭಾಷೆಯ ಗಂಧ-ಗಾಳಿಯೂ ಇಲ್ಲದ, ಈಸ್ಟ್ ವಿಂಡ್ಸರ್ ನಗರದ ಮಹಾ ಪೌರರಾದ (ಮೇಯರ್), ಜಾನಿಸ್ ಮಿರೋನೋವ್.   ಇಡೀ ಕಾರ್ಯಕ್ರಮಗಳನ್ನು ನೋಡಿ, ಅಮೇರಿಕಾದ ಅಧ್ಯಕ್ಷ ಶ್ರೀ ಜೋ ಬೈಡನ್ ಅವರ ಸ್ವಂತ ಹಸ್ತಾಕ್ಷರವುಳ್ಳ PVSA (ಪ್ರೆಸಿಡೆಂಟಿಯಲ್ ವಾಲೆಂಟರಿ ಸರ್ವಿಸ್ ಅವಾರ್ಡ್) ಪ್ರಶಸ್ತಿಗಳನ್ನು ನಮ್ಮ ಬೃಂದಾವನದ ಮಕ್ಕಳಾದ ಕುಮಾರಿ ರಚ್ ನಾ ಆಚಾರ್ಯ (ಚಿನ್ನ), ಕುಮಾರಿ ಸುದೀಪ್ತ ಮೂರ್ತಿ (ಕಂಚು) ಮತ್ತು ಕುಮಾರಿ ಅನನ್ಯ ಭಟ್ (ಕಂಚು) ಅವರಿಗೆ ವಿತರಿಸಿ, ಬೃಂದಾವನದ ಸಮುದಾಯ ಕೇಂದ್ರಿತ ಕೆಲಸಗಳಿಗೆ ಮೆಚ್ಚುಗೆ ಮತ್ತು ತಮ್ಮ ನಿರಂತರ ಬೆಂಬಲ ವ್ಯಕ್ತಪಡಿಸಿದರು.



ಬೆಳಗ್ಗೆ ಸುಮಾರು ಹತ್ತು ಗಂಟೆಯಿಂದ ಶುರುವಾದ ಕಾರ್ಯಕ್ರಮಗಳನ್ನು ಆಸ್ವಾಧಿಸುತ್ತಾ ಮನಃತೃಪ್ತರಾದವರ ಉದರವನ್ನು ತೃಪ್ತಿಗೊಳಿಸಿದ್ದು ಅಂದಿನ ಪಂಚ ಭಕ್ಷ ಪರಮಾನ್ನಭರಿತ ಬೊಂಭಾಟ್ ಭೋಜನ. ಮಾವಿನಕಾಯಿ ತೊವ್ವೆ, ಪುಳಿಯೋಗರೆ, ಹಪ್ಪಳ, ಸಂಡಿಗೆ, ಹಲಸಿನ ಕಾಯಿಯ ಕಡಲೆ ಪದಾರ್ಥ, ಕಾಯಿ ಹೋಳಿಗೆ, ಬಾದೂಷಾ, ಹಸಿ ಕಾಳು ಮೆಣಸಿನ ತಿಳಿ ಸಾರು, ರುಚಿಯಾದ ಮೊಸರನ್ನದ ಜೊತೆ ನಾಲಿಗೆ ಚಪ್ಪರಿಸುವಂಥ ಉಪ್ಪಿನಕಾಯಿ. ಆಹ್ಹಾ, ಹೆಸರುಗಳನ್ನೋತ್ತಿದ್ದರೇನೆ ಬಾಯಿತುಂಬಾ ನೀರೂರಿಸುವಂಥ ನಮ್ಮ ಕರ್ನಾಟಕದ ಸಾಂಪ್ರದಾಯಿಕ ರುಚಿಕರ ಖಾದ್ಯಗಳನ್ನೊಳಗೊಂಡ, ಈ ಸ್ವಾಧಿಷ್ಟಭರಿತ ಅದ್ದೂರಿ ಊಟ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿತ್ತು. ಸಾವಧಾನವಾಗಿ ಊಟ ಮಾಡಿ ಎಂದು ಹೇಳುತ್ತಾ ಎಲ್ಲರಿಗೂ ಬಡಿಸುತ್ತಿದ್ದ ಬೃಂದಾವನ ಸ್ವಯಂ ಸೇವಕರಿಗೆ, ರುಚಿಕರವಾಗಿ ಅಡುಗೆ ಮಾಡಿದಾತನಿಗೆ, ಎಲ್ಲರೂ "ಅನ್ನದಾತ ಸುಖೀಭವ" ಎಂದು ಹರಸುತ್ತಿದ್ದರು..

ವಸಂತೋತ್ಸವದ ಪ್ರಮುಖ ಆಕರ್ಷಣೆ, ಅಂಜಲಿ ಶಾನಭಾಗ್ ಅವರ ಸಾಕ್ಸೋಫೋನ್ ರಸಮಂಜರಿ. ಕನ್ನಡದ ಜನಪ್ರಿಯ ಸಿನಿಮಾ ಹಾಡುಗಳ ಮೂಲಕ ತನ್ನ ಮಾಂತ್ರಿಕತೆಯನ್ನು ಹೆಣೆದ ಶಾನಭಾಗರ ಸಾಕ್ಸೋಫೋನ್ ವಾದ್ಯದ ಪಾಂಡಿತ್ಯ, ಪೂರ್ಣ ಪ್ರಮಾಣದಲ್ಲಿ ಎದ್ದು ಕಾಣಿಸುತ್ತಿತ್ತು. “ಎಲ್ಲಿರುವೆ ಮನವ ಕಾಡುವ ರೂಪಸಿಯೇ”, "ಸಂತೋಷಕ್ಕೆ ಹಾಡು ಸಂತೋಷಕ್ಕೆ", "ಆಡಿಸಿ ನೋಡು ಬೀಳಿಸಿ ನೋಡು", "ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ" ಮುಂತಾದ ಚಿರಪರಿಚಿತ ಸುಮಧುರ ಗೀತೆಗಳು ಪ್ರೇಕ್ಷಕರ ನೆನಪಿನಂಗಳದಲ್ಲಿ ತಮ್ಮ ನೆಚ್ಚಿನ ಚಲನಚಿತ್ರಗೀತೆಗಳ ನಾಸ್ಟಾಲ್ಜಿಯಾ ಅಲೆಯನ್ನು ಎಬ್ಬಿಸಿದವು. ಆ ವಾದ್ಯಸಂಗೀತದಲ್ಲಿ ತಲ್ಲೀನರಾಗಿ, ಭಾವ ಪರವಶತೆಯಿಂದ ಎಲ್ಲರೂ ಸಭಾಂಗಣದಲ್ಲೇ ಹೆಜ್ಜೆ ಹಾಕಿದ್ದಂತೂ ಮೈ ಝುಮ್ ಎನಿಸುವಂತಿತ್ತು. ಅಂಜಲಿಯ ವೃತ್ತಿಪರತೆಯಿಂದ ಕೂಡಿದ ಉತ್ಕೃಷ್ಟ ಪ್ರದರ್ಶನವು ಅಂದಿನ ದಿನಕ್ಕೆ ಕಿರೀಟವನ್ನು ತೊಡಿಸಿದಂತೆ ತೋರುತ್ತಿತ್ತು.



ದಿನದ ಕಾರ್ಯಕ್ರಮದ ಪ್ರಾಯೋಜಕರಾದ ಬೂಮಿ ಕಾಫಿ ತಂಡದವರು ಆಹ್ವಾನಿತರೆಲ್ಲರಿಗೂ ಉಚಿತ ಕಾಫಿ ಮತ್ತು ಗುಡಿ ಬ್ಯಾಗ್‌ಗಳನ್ನು ಒದಗಿಸಿದರೆ, ರಾಫೆಲ್ ವಿಜೇತರಿಗೆ ಗಿಫ್ಟ್ ಹ್ಯಾಂಪರ್‌ಗಳನ್ನು ನೀಡಿದವರು ನ್ಯೂಯಾರ್ಕ್ ಲೈಫ್ ಇನ್ಶುರೆನ್ಸ್ ಪ್ರತಿನಿಧಿಗಳು.

ಕೊನೆಯಲ್ಲಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬೃಂದಾವನಿಗರು, ಕಲಾವಿದರು, ನಿರೂಪಕರು, ಪ್ರಾಯೋಜಕರು, ಇಡೀ ದಿನದ ಯಶಸ್ಸಿಗೆ ತೆರೆಯ ಹಿಂದೆ ಮುಂದೆ ಅಹರ್ನಿಶಿ ದುಡಿದ ಎಲ್ಲರಿಗೂ ಅಧ್ಯಕ್ಷೆ ಅರ್ಚನಾ, ಧನ್ಯವಾದಗಳನ್ನು ಸಮರ್ಪಿಸಿ ಈ ವರ್ಷದ ವಸಂತೋತ್ಸವಕ್ಕೆ ತೆರೆ ಎಳೆದರು.

ಒಟ್ಟಾರೆಯಾಗಿ ಅಂದಿನ ಅಭೂತಪೂರ್ವ ಕಾರ್ಯಕ್ರಮವನ್ನು ಆನಂದಿಸುತ್ತಾ ಅನುಭವಿಸಿ, ಹೊಸ ಸಂವತ್ಸರದ ಹೊಸ ಯೋಜನೆ, ಹೊಸ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವ ದಿಕ್ಕಿನಲ್ಲಿ ಆ ಸಂಜೆ ಹೆಜ್ಜೆ ಹಾಕುತ್ತಾ ಹೊರನಡೆದದ್ದು ನಿಜಕ್ಕೂ ಸಾರ್ಥಕ ಭಾವವನ್ನು ಮೂಡಿಸಿತ್ತು.









# ಮಕ್ಕಳೋತ್ಸವ ಮತ್ತು ವಾರ್ಷಿಕೋತ್ಸವ

**ಎಂ.ವಿ. ಶಶಿಭೂಷಣರಾಜು**, *ನ್ಯೂಜೆರ್ಸಿ*

ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ಮಕ್ಕಳೋತ್ಸವ ಮತ್ತು ವಾರ್ಷಿಕೋತ್ಸವ

ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟ ಜನವರಿ 13, 2024 ರಂದು  ಏರ್ಪಡಿಸಿದ್ದ ಮಕ್ಕಳೋತ್ಸವ ಮತ್ತು ವಾರ್ಷಿಕೋತ್ಸವ ತುಂಬಾ  ಅದ್ದೂರಿಯಿಂದ ನಡೆಯಿತು. ಇದೇ ದಿನ ಸಂಕ್ರಾಂತಿ ಹಬ್ಬದ ಆಚರಣೆಯೂ ನಡೆಯಿತು. ಚಿಣ್ಣರ ವಿವಿಧ ಕಾರ್ಯಕ್ರಮಗಳು ಎಲ್ಲರ ಮನ ತಣಿಸಿದವು

ಮಾಲ್ಬರೋ ಕನ್ನಡ ಶಾಲೆಯ ಮಕ್ಕಳು ಕರ್ನಾಟಕದ ವಿವಿಧ ರೀತಿಯ ಕನ್ನಡ ಉಚ್ಚಾರಣೆಯ ಬಗ್ಗೆ ಕರ್ನಾಟಕದ ವಿಶಿಷ್ಟತೆ ಎನ್ನುವ ಕಾರ್ಯಕ್ರಮದ ಅಡಿಯಲ್ಲಿ ನಡೆಸಿಕೊಟ್ಟಿದ್ದು ಅನನ್ಯವಾಗಿತ್ತು, ಅಲ್ಲಿ ಕನ್ನಡ ಭಾಷೆ ಹೇಗೆ ಎಲ್ಲೆಲ್ಲಿ ಮಾತನಾಡಲ್ಪಡುತ್ತದೆ ಎಂದು ಕನ್ನಡ ಗೀತೆಗಳ ಮೂಲಕ ತೋರಿಸಿಕೊಟ್ಟರು. ಅದೇ ರೀತಿ ಕರ್ನಾಟಕದ ವಿವಿಧ ಸ್ಥಳಗಳ ಪರಿಚಯಮಾಡಿಕೊಟ್ಟರು..




ರಾಗರಂಜನಿ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳು ರಾಗಗಳ ರಮ್ಯ ಸರಮಾಲೆ ಪೋಣಿಸಿ ರಂಜಿಸಿದರು.  ಡಾನ್ಸ್ ಮಗ ಡಾನ್ಸ್ ಕಾರ್ಯಕ್ರಮದ ಅಡಿಯಲ್ಲಿ ಅಮ್ಮಂದಿರು ತಮ್ಮ ಗಂಡು ಮಕ್ಕಳ ಜೊತೆ ಕುಣಿದಿದ್ದು ಎಲ್ಲರ ಮುಖದಲ್ಲಿ ನಗು ಅರಳಿಸಿತು. ಎಡಿಸನನ್ನಿನ ಬಾಲ ಗುಡಿಯ ಮಕ್ಕಳು ಕ್ರಿಕೆಟ್ ಆಡುತ್ತಾ ಮುಂದಿನ ಸಲ ಕಪ್ಪ್ ನಮ್ಮದೇ ಎಂದು ಆಶಾವಾದವನ್ನು ಬಿಂಬಿಸಿದ್ದು ಜೀವನಪಾಠದಂತಿತ್ತು. ಮಕ್ಕಳು ಬ್ಯಾಟ್ಸ್ ಮ್ಯಾನ್, ಬೌಲರ್, ಅಂಪೈರ್ ಆಗಿ ಮಾತನಾಡಿಕೊಳ್ಳುತ್ತ ಆಟ ಆಡಿದ್ದು ಮನರಂಜಿಸಿತು. ಇದರ ಜೊತೆ ಮಾಲ್ಗುಡಿ ಡೇಸ್ ನ ಸ್ವಾಮಿ ಮತ್ತು ಸ್ನೇಹಿತರ ಕಥೆಯ ತುಣುಕೂ ಮೂಡಿಬಂತು.






"ಹುಲಿ ಹೊಡೆದೋರು ಯಾರು" ನಾಟಕ ಈಸ್ಟ್ ವಿಂಡ್ಸರ್ ಮಕ್ಕಳಿಂದ ಪ್ರದರ್ಶಿಸಲ್ಪಟ್ಟಿತು. ಮಕ್ಕಳು ಮುದ್ದಾಗಿ ತಮ್ಮದೇ ಉಚ್ಚಾರಣೆಯಿಂದ ಮಾತನಾಡುತ್ತ, ಹುಲಿ ಹೊಡೆದವರು ಯಾರು ಎನ್ನುವ ರಹಸ್ಯವನ್ನು ಕೊನೆಯವರೆಗೂ ಕಾಪಾಡಿಕೊಳ್ಳುತ್ತಾ ಅಮೋಘವಾಗಿ ಪ್ರದರ್ಶಿಸಿದರು.



ಯುವ ಬೃಂದಾವನ ಮಕ್ಕಳಿಂದ ಮೊದಲಬಾರಿಗೆ "ಎಲ್ಲಾದರು ಇರು ಎಂತಾದರು ಇರು" ಎನ್ನುವ ನಾಟಕ ಪ್ರದರ್ಶನ ನಡೆಯಿತು. ಮಕ್ಕಳು ಕನ್ನಡದ ಹೆಮ್ಮೆ ಸಾರಿದ್ದು ಎಲ್ಲರು ಹೆಮ್ಮೆಪಡಬೇಕಾದ ಸಂಗತಿ. ಇದರ ಜೊತೆ ವಿವಿಧ ಹಬ್ಬಗಳ ವಿಶೇಷತೆ ಸಾರುವ "ಹಬ್ಬಗಳ ಸಂಭ್ರಮ" ಎನ್ನುವ ಕಾರ್ಯಕ್ರಮ ಸೌತ್ ಬ್ರನ್ಸ್ವಿಕ್ ಮಕ್ಕಳಿಂದ ನಡೆಯಿತು. ಮಕ್ಕಳು ಭಾರತದ ಒಂದೊಂದೇ ಹಬ್ಬಗಳ ವಿಶೇಷ ಸಾರಿದ್ದು ಚನ್ನಾಗಿ ಮೂಡಿಬಂತು





ಬೃಂದಾವನ ಕನ್ನಡ ಕೂಟದ ನವತಾರೆಗಳು ಕನ್ನಡ ಚಿತ್ರರಂಗದ ನವತಾರೆಗಳನ್ನು ತಮ್ಮ ವಾದ್ಯಗೋಷ್ಠಿಯ ಮೂಲಕ ಪರಿಚಯಿಸಿದರು. ವೃತ್ತಿನಿರತ ಕಲಾವಿದರಂತೆ ಒಬ್ಬೊಬ್ಬರು ಒಂದೊಂದು ವಿಧದ ವಾದ್ಯದಿಂದ, ಕನ್ನಡದ ತಾರೆಗಳಾದ ಡಾ.ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್, ಶ್ರೀನಾಥ್, ಅನಂತ್ ನಾಗ್, ಶಂಕರ್ ನಾಗ್, ರವಿಚಂದ್ರನ್, ರಮೇಶ್ ಹಾಗು ಯಶ್ ಅವರ ಚಲನಚಿತ್ರಗಳ ಹಾಡುಗಳನ್ನು ತಮ್ಮ ವಾದ್ಯಗಳಿಂದ ನುಡಿಸಿ ಪ್ರೇಕ್ಷಕರ ಮನಸೂರೆಗೊಂಡರು.



ಇಡೀ ಮಕ್ಕಳೋತ್ಸವ ಯಾವುದೇ  ಪ್ರಸಿದ್ಧ ವ್ಯಕ್ತಿಗಳ ಕಾರ್ಯಕ್ರಮವಿಲ್ಲದೆ ನಡೆದಿದ್ದು ಒಂದು ವಿಶೇಷ. ಮಕ್ಕಳು ಸೆಲಬ್ರಿಟಿಗಳಿಗಳಷ್ಟೇ ಪ್ರತಿಭೆ ತೋರಿಸಿದ್ದು, ಅವರು ಪ್ರತಿಭೆಗೆ, ಅಭ್ಯಾಸಕ್ಕೆ ಸಾಕ್ಷಿ. ಇಡೀ ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ನಡೆಯಿತು.


ಬೃಂದಾವನ
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ


ಬೃಂದಾವನ
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ


ಈಸ್ಟ್ ವಿಂಡ್ಸರ್
ಕನ್ನಡ ಶಾಲೆ







# ಬರಹಗಳು

## ಚೈತ್ರದ ಭೃಂಗ.....

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



# ನನ್ನ ಬಾಲ್ಯ

ರಾಗಿಣಿ. ನ್ಯೂಜೆರ್ಸಿ.

## ಪರಿಪೂರ್ಣ ಆರೋಗ್ಯದೊಂದಿಗೆ ನಾನು ಆರಂಭಿಸುತ್ತೇನೆ

ನಾನು ನನ್ನ ಬಾಲ್ಯಾವನ್ನು ನೆನೆಸಿ ಕೋಂಡಾಗಲೆಲ್ಲಾ, ನಮ್ಮ ಹಳ್ಳಿಯ ಜೀವನ ಜ್ಞಾಪಕ ಬರುತ್ತದೆ. ಆ ಮುಗದ್ದತೆ, ಸ್ವೇಚ್ಛಾ ಜೀವನ ಮತ್ತು ಹುಡುಗಾಟದ ದಿನಗಳು ಮತ್ತೆ ಎಂದಿಗು ಸಿಗುವುದಿಲ್ಲ. ನಮ್ಮ ಹಳ್ಳಿ, ಕಗ್ಗ ಹಳ್ಳಿಯೇನು ಅಲ್ಲ. ಸರಕಾರೀ ಶಾಲೆ - ಶಿಶುವಿಹಾರ ದಿಂದ ಹತ್ತನೇ ತರಗತಿವರಗೆ ಇತ್ತು. ಆಸ್ಪತ್ರೆ, ಅಂಚೆಕಚೇರಿ, ಗ್ರಾಮ ಪಂಚಾಯತಿ, ಮುಖ್ಯ ರಸ್ತೆ, ದಿನಕ್ಕೆ ಒಂದೋ, ಎರಡೋ ಮೋಟಾರ್ ವಾಹನಗಳು ಓಡಾಡುತಿದ್ದವು. ಅನುಕೂಲ ಇದ್ದವರು ಮನೆಗೆ ಎಲೆಕ್ಟ್ರಿಕ್ ದೀಪ, ನಲ್ಲಿ ನೀರು, ಮತ್ತು ಮನೆ ಪಕ್ಕದಲ್ಲೇ ಪಯಕಾನೆ (toilet) ಹಾಕಿಸಿಕೊಂಡಿದ್ದರು.

ನಮ್ಮೂರಿನಲ್ಲಿ ಸುಮಾರು ಮೂರು ಸಾವಿರ ಜನ ಸಂಕೆ ಇತ್ತು. ಅದರಲ್ಲಿ ಶೇಕಡಾ 25 ರಿಂದ 30 ರಷ್ಟು ನನ್ನ ತಂದೆಯವರ ಬಂದು ಬಳಗದವರು. ನಮ್ಮ ತಂದೆಗೆ 6 ಜನ ಒಡಹುಟ್ಟಿದವರು, ಇವರೇ ಕೊನೆಯ ಮಗ ಮತ್ತು ವಿದ್ಯಾವಂತರು. ನನ್ನ ತಾತ, ಅವರ ಹಳ್ಳಿಗೆ ಡಾಕ್ಟರ್ಗಳು ಬರುವುದಕ್ಕೆ ಒಪ್ಪುವುದಿಲ್ಲ ಎಂದು, ತಮ್ಮ ಕೊನೆಯ ಮಗನ ಇಷ್ಟಕ್ಕೆ ವಿರುದ್ದವಾಗಿ, ಮೈಸೂರ್ ಮಹಾರಾಜ ಮೆಡಿಕಲ್ ಕಾಲೇಜ್ಗೆ ಸೇರಿಸಿ ಡಾಕ್ಟರ್ ಪದವಿ ಕೊಡಿಸಿದ್ದರು. ಇದು ಭಾರತಕ್ಕೆ ಸ್ವತಂತ್ರ ಬರುವುದಕ್ಕೆ ಮೊದಲು. ನನ್ನ ತಂದೆಯ ಬಹುತೇಕ ಪ್ರಾಧ್ಯಾಪಕರೆಲ್ಲ ಆಂಗ್ಲ ಭಾಷೆಯರು (ಬ್ರಿಟಿಷ್).
ನಮ್ಮದು ರೈತ ಕುಟುಂಬ, ಹೊಲ,ಗದ್ದೆ, ತೋಟ ಎಲ್ಲಾ ಇತ್ತು. ನಮ್ಮ ಬಹುತೇಕ ಆಹಾರವನ್ನು ಯಾವುದೇ ರಾಸಾಯನಿಕ ಗೊಬ್ರ, ಕ್ರಿಮಿಕೀಟ ಗಳಿಗೆ ಅಷ್ಟಾಗಿ ಔಷಧೀ ಹೊಡೆಯದೆ ಅಕ್ಕಿ, ರಾಗಿ, ಜೋಳ, ಕಬ್ಬು, ತೆಂಗಿನಕಾಯಿ,ವಿಳ್ಳೇದೆಲೆ, ಹುಚ್ಚೆಳ್ಳು, ಅವರೇಕಾಯಿ, ಮಾವಿನಹಣ್ಣು, ಬೆಳೆದುಕೊಳ್ತಿದ್ದೆವು. ಈಗ ನೆನೆಸಿಕೊಡರೆ ನಮ್ಮ ಅಡುಗೆ ಪ್ರತಿ ದಿನ ಅಕ್ಷರಸಹ "ಫಾರ್ಮ್ ಟು ಟೇಬಲ್" ಕಾನ್ಸೆಪ್ಟ್. ಬೆಳಿಗ್ಗೆ ಕಾಫೀಗೆ ಆಗತಾನೇ ಕರೆದ ಘಟ್ಟಿನೊರೆ ಎಮ್ಮೆ ಹಾಲು, ದಿನಕ್ಕೆ ಎರಡುಸಲ ಹಾಲು ಕರೆಯುತ್ತಿದ್ದರು, ಆ ಕಾಫೀ ಕುಡಿದರೆ ಮತ್ತೆ ಯಾವ Starbuck ಕಾಫೀನು ರುಚಿ ಅನುಸುವುದಿಲ್ಲ. ನಮ್ಮ ಮನೆಯಲ್ಲಿ ಹಸು, ಎಮ್ಮೆ ಎರಡು ಇತ್ತು. ಗಟ್ಟಿ ಹಾಲಿನ ಬೆಣ್ಣೆ, ಮೊಸರು ಪ್ರತಿನಿತ್ಯ ಮಾಡುತ್ತಿದ್ದರು. ನಿಂಬೇ ಕಾಯಿ ಗಾತ್ರದ ಬೆಣ್ಣೆ, ಬಿಸಿ ಬಿಸಿ ರೊಟ್ಟಿಗೆ, ಆಗತಾನೇ ಒಡೆದ ತೆಂಗಿನಕಾಯಿ ಚಟ್ನಿಜೊತೆ ತಿಂದರೇ.. ಆಹಾ, ಸ್ವರ್ಗಕ್ಕೆ ಮೂರೇ ಗೇಣು. ಈಗಲೂ ಜ್ಞಾಪಿಸಿ ಕೊಂಡರೆ ಬಾಯಲ್ಲಿ ನೀರು ಸುರಿಯುತ್ತದೆ.

ಅವರೇಕಾಯೀ ಬೆಳೆಯುವ ಕಾಲದಲ್ಲಿ, ನಾವೆಲ್ಲರು ಸೂರ್ಯ ಹುಟ್ಟುವುದಕ್ಕೆ ಮುಂಚೆ ಎದ್ದು ಸೋನೆ ಅವರೇಕೈ ಬೇಡಿಸುವುದಕ್ಕೆ ಮಂಕ್ರಿ ತಗೊಂಡು ಹೋಗುತ್ತಿದ್ದೆವು. ಮನೆಗೆ ವಾಪಸ್ಸು ಬಂದು ಆವರೇಕಾಯಿ ಸಿಪ್ಪೆ ಬಿಡಿಸಿ, ನಮ್ಮ ರೈತ ಕುಟುಂಬದ ಸರಳ ಆಡಿಗೆ ಮಾಡುತ್ತಿದೆವು. ಅಂದರೆ ಉಪ್ಪಸರೂ, ಉಪ್ಪುಸಾರ್ ಕಾರ, ಅದಕ್ಕೆಸ್ವಲ್ಪ ತುಪ್ಪ ಹಾಕಿ ರಾಗಿ ಮುದ್ದೆ ಜೊತೆ ತಿಂದರೆ ರಾತ್ರಿ ತನಕ ಹಸಿವು ಆಗುತ್ತಿರಲಿಲ್ಲ. ಅವರೇಕಾಯಿ ಕಾಲದಲ್ಲಿ ಪ್ರತೀ ದಿನ ಬರೀ ಆವೇರೆಕಾಯಿ ಅಡಿಗೆನೇ. ಆವೇರೆಕಾಯಿ ಉಪ್ಪಿಟ್ಟು, ಆವೇರೆಕೈರೊಟ್ಟಿ, ಹಿತಿಗಿದ ಆವೇರೆಕಾಯಿ ಸಾರು. ಬಲ್ಲವರೆ ಬಲ್ಲರು ಅದರ ರುಚಿಯ. ನಾವು ತಿಂದಿದ್ದೇ ತಿಂದಿದ್ದು. ಎಲ್ಲರಿಗೂ ಗೊತ್ತಿರುವಹಾಗೆ, ಆವರೇಕಾಯಿ ಸ್ವಲ್ಪ ವಾಯು, ಮಕ್ಕಳಾದ ನಾವು ಗಾಳಿ ಹಿಂದೆಯಿಂದ ಬರುತ್ತೊ, ಮುಂದೆಯಿಂದ ಬರುತ್ತೊ , ಹಾಗೂ ಯಾರು ಮೊದಲ ಬಲಿ ಪಶು ಅಂತ ಕಾಯುವುದು. ಕೆಲವು ಸಲ ಅದರ ಕಲ್ಪನೆಯಲ್ಲೇ ಹೊಟ್ಟೆ ಹುಣಾಗುವಷ್ಟು ನಕ್ಕಿದ್ದು ಇದೆ.



ಶಾಲೆಗೆ ಪ್ರತಿ ಶನಿವಾರ ಅರ್ಧ ದಿನ ರಜಾ, ಮೇಷ್ಟ್ರು ಹಿಂದಿನ ದಿನವೇ, "ನಾಳೆ  ಓಪತ್ತು " ಎಂದು ಹೇಳಿ ಕಳಿಸುತ್ತಿದ್ದರು.  ಶನಿವಾರ ಶಾಲೆ ಮುಗಿಯುವುದೇ ತಡ, ಮನೆಗೆ ಓಡಿಹೋಗಿ, ಸ್ಲೇಟು, ಬಳಪ ಎಸೆದು ನಾನು ಮತ್ತು ನನ್ನ ಸಂಬಂಧಿಕರ ಮಕ್ಕಳು, ಕಬ್ಬಿನ ಗದ್ದೆಗೆ ಹೋಗಿ, ರಸವತ್ತಾಗಿರುವ ಕಬ್ಬನ್ನು ಕಿತ್ತು, ನನ್ನ ದೊಡಪ್ಪನ ಆಲೇಮನೆಗೆ ಹೋಗಿ, ಬೆಲ್ಲದ ಪಾಕ ಅಚ್ಚಿಗೆ ಸುರಿಯುವಾಗ, ಜಲ್ಲೆಗೆ ಲೇಪಿಸಿ ಕೊಳ್ಳುತ್ತಿದ್ದೆವು.  ಅಲ್ಲಿಂದ ನಮ್ಮ ಕಪಿ ಸೈನ್ಯದ ಮುಂದಿನ ಪ್ರಯಾಣ ಹೊಳೆಯ ಕಡೆಗೆ.  ದಾರಿ ಉದ್ದಕ್ಕೂ ಬೆಲ್ಲದ ಸಣ್ಣ ಸಣ್ಣ ಉಂಡೆ ಮಾಡಿ ಕಲ್ಲಿಗೆ ರಪ್ಪ ಎಂದು ಎಸೆದಾಗ, ಅದು ಚಿನಕುರಳಿ ಪಟಾಕಿ ಶಬ್ದ ಬರುತ್ತಿತ್ತು, ಯಾರು ರಭಸವಾಗಿ ಎಸೆಯುತ್ತಾರೆ  ಅಂತ ಸವಾಲು ಹಾಕಿಕೊಂಡು ಗಲಬೆ ಮಾಡಿಕೊಂಡು ಹೋಗುತ್ತಿದೇವು.  ಬೆಲ್ಲ, ಕಬ್ಬು ತಿಂದಮೇಲೆ ಬಾಯಾರಿಕೆ ಹೆಚ್ಚು, ನೀರು ಕೂಡಿಯಲೇಬೇಕು, ಆದರೆ ಕಬ್ಬು ತಿಂದು ತಕ್ಷಣ ನೀರು ಕುಡಿದರೆ ನಾಲಿಗೆ ಸೀಳುತ್ತೇ, ನಮಗೆ ಎಲ್ಲಿ ಬರಬೇಕು ತಾಳ್ಮೆ , ನೀರು ಕುಡಿದು ನಾಲಿಗೆ ಸೀಳಿಸಿ, ಉರಿ ಬಂದರು ಅದೇ ತಪ್ಪು ಮತ್ತೆ, ಮತ್ತೆ ಮಾಡುತ್ತಿದ್ದೆವು. ನೀರು ಕುಡಿದ ತಕ್ಷಣ ಮುಳ್ಳಿನಲ್ಲಿ ನಾಲಿಗೆ ತೀಡಿದಹಾಗೆ ಆಗುತ್ತಿತ್ತು.  ನೀರಿಗಿಳಿದ ಮೇಲೆ ಸುಮ್ಮನೆ ಇರುವುದು ಹೇಗೆ, ಒಬ್ಬರಿಗೊಬ್ಬರಿಗೆ ನೀರು ಎರಚುವುದು,  ಸಣ್ಣ ಸಣ್ಣ ಮೀನು ಹಿಡಿಯುವುದಕ್ಕೆ ವಿಫಲ ಪ್ರಯತ್ನಮಾಡಿ ಬಟ್ಟೆ ಒದ್ದೆ ಮಾಡಿಕೊಳ್ಳುವುದು. ಒದ್ದೆ ಬಟ್ಟೆಲಿ ಮನೆಗೆ ಹೋದರೆ ಖಂಡಿತ  ಏಟುಗಳು ಬೆಳುತ್ತೇ ಅಂತ, ಹೊಳೆ ದಂಡೆಯ ಹತ್ತಿರವೇ ಇದ್ದ ಬಂಡೆ ಕಲ್ಲಿನ ಮೇಲೆ ಕುಳಿತು, ಮತ, ಮತ ಮದ್ಯನದಲ್ಲಿ ಬಟ್ಟೆ ಒಣಗುವತನಕ ಕಾಯುವುದು.

ಅಷ್ಟು ಹೊತ್ತಿಗೆ ಹೊಟ್ಟೆ ತಾಳ ಹಾಕುವುದಕ್ಕೆ ಶುರುವಾಗುತ್ತಿತು, ಎಲ್ಲರೂ ಬಂದು ಬಳಗದವರೆ ಆಗಿದ್ದರಿಂದ, ಹತ್ತಿರ ಯಾರ ಮನೆ ಸಿಗುತ್ತೊ ಅಲ್ಲಿಗೆ ಹೋಗಿ ಅವರು ತಿಂಡಿನೋ, ಊಟನೋ ಕೊಟ್ಟರೆ ತಿಂದು, ಸ್ವಲ್ಪ ಕೂತ ಹಾಗೆ ಮಾಡಿ, ಬಿಸಿಲು ಜಾಸ್ತಿ ಇದ್ದರೆ ಪಡಸಾಲೆ ಮೇಲೆ ಕೂತು, ಕೇರಂ, ಅಳ್ಳಿಗುಳಿಮಣೆ, ಚೌಕಬಾರ ಅಥವಾ ಅಣ್ಣೇಕಲ್ಲು ಆಡುತ್ತಿದ್ದೆವು.  ಸ್ವಲ್ಪ ಸೂರ್ಯನ ಬಿಸಿಲು ಕಡಿಮೆಯಾದರೆ ಕಣ್ಣಾಮುಚ್ಚಾಲೆ, ಐ  ಸ್ಪೈಸು, ಮಳ್ಳ ವಂಥು ಗಿಲ್ಲಿ ಪೋ ಆಡುತ್ತಿದೆವು  (ನನಗೆ ಅದು ತಮಿಳು ಭಾಷೆ ಅಂತ ಸುಮಾರು ದೊಡ್ಡವಳಾಗುವ ತನಕ ಗೊತ್ತೇ ಇರಲಿಲ್ಲ).



ಬಾನುವಾರ, ನಮ್ಮ ಊರಿನಲ್ಲಿ ಸಂತೆ, ಎಲ್ಲರೂ ಸಂತೆಯಲ್ಲಿ ಮಾರುವುದು, ಕೊಂಡುಕೊಳ್ಳುವುದು, ವಾರಕ್ಕೆ ಒಂದೇ ದಿನ ಅವಕಾಶ. ನನ್ನ ತಂದೆ ನಮಗೆ 25 ಪೈಸೆ ಕೊಟ್ಟು, ಇಷ್ಟ ಇರುವ ತಿಂಡಿ ಪದಾರ್ಥ ತೆಗದುಕೊಳ್ಳಿ  ಎಂದು ಕೊಡುತ್ತಿದ್ದರು.  ನಾನೂ ಮತ್ತು ನನ್ನ ಅಕ್ಕ ಸಂತೆ ಮಳಕ್ಕೆ ಹೋಗಿ ಇಷ್ಟವಾದ ಸಾಮಾನುಗಳನ್ನು ತೆಗೆದುಕೊಳ್ಳುತ್ತಿದ್ದೆವು.  ಮೊದ ಮೊದಲು 25 ಪೈಸೆ, ಜಾಸ್ತಿ ಅನ್ನಿಸುತಿತ್ತು.  ವಾರಗಳು ಕಳೆದಹಾಗೆ, ವ್ಯಪಾರಿಗಳು ಬಲೂನು, ಜಡೆಗೆ ರಿಬ್ಬನ್ ತೋರಿಸಿದಾಗ, ಹಣದ ಅವಶ್ಯಕತೆ ಹೆಚ್ಚಾಆಯಿತು . ನಮ್ಮ ತಂದೆ ೨೫ ಪೈಸೆ ಗಿಂತ ಹೆಚ್ಚು ಕೊಡುತ್ತಿರಲಿಲ್ಲ, (ಅವರು ಯಾವಾಗಲು ಹೇಳು ತ್ತಿದ್ದ ಮಾತು, "ಹಣ ಗಿಡದ  ಮೇಲೆ ಬೆಳೆಯುತ್ತ , ಕೇಳು ಕೇಳೀದಾಗಲೆಲ್ಲಾ ಕೊಡಕ್ಕೆ").

ಹಣ ಸಂಪಾದನೆ ಮಾಡುವುದಕ್ಕೆ ನನ್ನಗೆ ಒಂದು ಉಪಾಯ ಹೊಳೆದು, ಮಾರನೇ ದಿನ ಒಂದು ಚುಚ್ಚುಮದ್ದು ಕಾಲಿ ಶಿಶೇಗೆ ಬಳಪ ಹಾಕಿ, ನನ್ನ ಸ್ನೇಹಿತರಿಗೆ ತೋರಿಸಿ, ಒಂದು ಪೈಸೆ ಕೊಟ್ಟರೆ ಅವರಿಗೂ ತಂದೆ ಕ್ಲಿನಿಕ್ ನಿಂದ ತಂದು ಕೊಡುತ್ತೇನೆ ಎಂದು ಹೇಳಿದೆ, ನಮ್ಮ ತರಗತಿಯ ಕೆಲವು ಮಕ್ಕಳಿಗೆ ಈ ಸಲಹೆ ಬಳಹಳ  ಇಷ್ಟ ಆಗಿ ಒಂದೊಂದು ಪೈಸೆ ಮಾರನೇ ದಿನ ತಂದು ಕೊಟ್ಟರು, ನನ್ನ ಪ್ರಾಥಮಿಕ ಶಾಲೆ, ನನ್ನ ತಂದೆಯ ಕ್ಲಿನಿಕ್ ಪಕ್ಕದಲ್ಲೇ ಇತ್ತು. ಅಲ್ಲಿಗೆ  ಹೋಗಿ ಕಾಲಿ ಶೀಷೆಗೆಳನ್ನು ತೆಗೆದುಕೊಂಡು ಹೋಗಿ ದುಡ್ಡು ಕೊಟ್ಟವರಿಗೆಲ್ಲ ಕೊಟ್ಟೆ. ಮೊದ ಮೊದಲು, ನನ್ನ ವ್ಯಪಾರ ಚೆನ್ನಾಗಿ ನಡೆಯಿತು.

ಈ ನನ್ನ ಕಾರುಬಾರು ಬೇರೆ ತರಗತಿಯ ಮಕ್ಕಳಿಗೆ ಗೊತ್ತಾಗಿ, ಪೈಪೋಟಿಯಿಂದ ಮುಂಗಡವಾಗಿ ಹಣವನ್ನು ಕೊಟ್ಟರು, ಭರದಿಂದ ನಡೆಯುತ್ತಿರುವ ವ್ಯಾಪಾರವನ್ನು ಬೇಡ ಎಂದು ಹೇಗೆ ಹೇಳುವುದು, ಕೆಲವರು ಒಂದು ಪೈಸೆ ಕೊಟ್ಟರು, ಹಣವಿಲ್ಲದವರು, ಒಂದು ಸಣ್ಣ ಬಳಪ ಅಥವಾ ಸೀಮೆಸುಣ್ಣ ಕೊಟ್ಟರು.  ಆದರೆ ಸಪ್ಲಯ್ ಗಿಂತ ಡಿಮಾಂಡ್ ಜಾಸ್ತಿ ಆಯಿತು. ನನ್ನ ತಂದೆಗೆ ದಿನಕ್ಕೆ ಎಂಟು ಅಥವ ಹತ್ತು ರೋಗಿಗಳು ಬಂದರೆ ಹೆಚ್ಚು, ಅದರಲ್ಲೂ ಮೂರು ತಪ್ಪಿದರೆ ನಾಲ್ಕು ಜನ ಚುಚ್ಚುಮದ್ದು ಕೊಡಿಸಿಕೊಳ್ಳುವವರು ಇರುತ್ತಿದ್ದರು.

ದಿನಕ್ಕೆ ಮೂರೋ ನಾಲ್ಕೂ ಕಾಲಿ ಶಿಶೇ ಸಿಕ್ಕರೆ ಹೆಚ್ಚು.  ಹಾಗಾಗಿ, ನನ್ನ ದುಡ್ಡು ಕೊಟ್ಟ ಗಿರಕಿಗಳಿಗೆ ಸರಕು ಸರಬರಾಜು ಮಾಡುವುದಕ್ಕೆ ಸಮಯಕ್ಕೆ ಸರಿಯಾಗಿ ಕೊಡುವುದಕ್ಕೆ ಆಗಲಿಲ್ಲ. ದುಡ್ಡು ಕೊಟ್ಟ ಮೇಲು ಸರಕು ಸಿಕ್ಕದಿದ್ದರಿಂದ ಸ್ವಲ್ಪ ತಾಳಿಮೆ ಕಳೆದುಕೊಂಡು ನನ್ನನ್ನು  ಶಿಶೇ ಕೊಡು ಎಂದು ಪಿಡಿಸುವುದಕ್ಕೆ ಶುರುಮಾಡಿದರು.  ನಾನೂ ಪದೇ ಪದೇ ಆಟದಕ್ಕೆ ಬಿಟ್ಟಾಗ, ಊಟಕ್ಕೆ ಬಿಟ್ಟಾಗ ಪ್ರಾಥಮಿಕ ಶಾಲೆ ಪಕ್ಕದಲ್ಲೇ ಇದ್ದ ನನ್ನ ತಂದೆಯ ಕ್ಲಿನಿಕ್ ಗೆ ಹೋಗುವುದು, ತಂದೆಯವರಿಗೆ ಎಷ್ಟು ಚುಚ್ಚುಮದ್ದು ಕೊಟ್ಟಿರಿ, ಬಂದ ರೋಗಿಗಳಿಗೆಲ್ಲ ಏಕೆ ನೀವು ಕೊಡುವುದಿಲ್ಲ, ಕಾಲಿ ಶಿಶೇಯೇನು ಮಾಡಿದಿರಿ ಎಂದು ಪ್ರಶ್ನಿಸುವುದು, ಆವರು ನನ್ನ ಮಾತನ್ನು ಅಷ್ಟು ಗಮನಕ್ಕೆ ತೆಗೆದುಕೊಳ್ಳಲಿಲ್ಲ.  ನೀನೆ ಹೋಗಿ ಟೇಬಲ್ ಮೇಲೆ ನೋಡು ಎಂದು ಹೇಳಿ ರೋಗಿಗಳ ಚಿಕಿತ್ಸೆ ಯಲ್ಲಿ ಮಗ್ನರಾಗುತ್ತಿದ್ದರು.  ತಾಳ್ಮೆ ಕಳೆದೊಕೊಂಡ, ನನ್ನ ಗಿರಾಕಿಗಳು ಕೋಪಮಾಡಿಕೊಂಡು, ನನ್ನ ತಂದೆ ಕ್ಲಿನಿಕ್ ಮುಂದೆನೇ ಬಂದರು. ಮಕ್ಕಳ ಗಲಾಟೆ ಕೇಳಿ, ನನ್ನ ತಂದೆ ಹೊರಕ್ಕೆ ಬಂದು, ಏಕೆ ಯಂದು ಕೇಳಿದಾಗ, ನಾನು ಚುಚ್ಚುಮದ್ದು ಕಾಲಿ ಶೀಷೆಗಳನ್ನು ಒಂದು ಪೈಸೆಗೆ ಮಾರಿರುವುದಾಗಿ, ಅವರು ಜಾಸ್ತಿ ರೊಗಿಗಳಿಗೆ ಚಚ್ಚು ಮದ್ದು ಕೋಡದ್ದಿದ್ದರಿಂದ, ನನಗೆ ಸಾಕಷ್ಟು ಕಾಲಿ ಶಿಶೇ ಸಿಕ್ಕಲಿಲ್ಲ ಎಂದು ಹೇಳಿದಾಗ ಜೋರಾಗಿ ನಗುವುದಕ್ಕೆ ಶುರುಮಾಡಿದರು.  "ಅದಕ್ಕೇನ ನೀನು ಪದೇ ಪದೇ ಬಂದು ಕಾಲಿ ಶಿಶೇ ಎಲ್ಲಿ ಎಂದು ಕೇಳುತ್ತಿರುವುದು?' ಅಂತ ಕೇಳಿದರು. ಆಮೇಲೆ ನನ್ನ ಗಿರಾಕಿಗಳಿಗೆ ಸಮಾದಾನ ಮಾಡಿ, ಅವರ ದುಡ್ಡು ವಾಪಸ್ ಕೊಟ್ಟು, ಕಾಲಿ ಶೀಷ ಶೇಕರ ವಾದಾಗ ಬಿಟ್ಟಿ ಕೊಡುವೆ ಎಂದು ಆಶ್ವಾಸನೆ ಕೊಟ್ಟು, ಮಕ್ಕಳುನ್ನು  ತಮ್ಮ ತಮ್ಮ ಮನೆಗಳಿಗೆ ಕಳುಹಿಸಿದರು. ನನ್ನ ತಂದೆ ನನ್ನ ಈ ಸಾಹಸ ನೋಡಿ ಕೋಪ ಮಾಡಿಕೊಳ್ಳಲಿಲ್ಲ.  ಆದರೆ, ಅವರಿಗೆ ನನ್ನನ್ನು ರೇಗಿಸುವುದು ಅಂದರೆ ಬಹಳ ಕುಶಿ, ರೇಗಿಸುವುದಕ್ಕೆ ಮತ್ತೊಂದು ಕಾರಣ  ಅನ್ಯಾಯವಾಗಿ ನಾನೇ ಅವರಿಗೆ ಅವಕಾಶಕೊಟ್ಟ ಹಗ್ಯೆತು, ಎಂದು ನನ್ನ ಮೇಲೆ ನನಗೆ ಕೋಪ ಬಂತು.

ನಮ್ಮ ಮನೆ ಹಿತ್ತಲಲ್ಲಿ ಒಂದು ಚಿಕ್ಕ ನೆಲ್ಲಿಕಾಯಿ ಮರ ಇತ್ತು, ನಾನು ಅದರ ಮೇಲೆ ಹತ್ತಿ, ಉಪ್ಪು ಕಾರದ ಜೊತೆ ನಲ್ಲಿಕಾಯಿ ತಿಂದು ಗಂಟೆ ಗಟ್ಟಲೆ ಕುಳಿತರೆ ಸಮಯ ಹೋಗುವುದೇ ಗೊತ್ತಗುತ್ತಿರಲಿಲ್ಲ. ಎಷ್ಟೊಂದು ಸಲ ನನ್ನ ತಂದೆ ಊಟಕ್ಕೆ ಕರಯುವವರಿಗೆ ಅಲ್ಲೇ ಕುಳಿತಿರುತ್ತಿದ್ದೆ.ಬಂದು ಚಾಕೋಲೇಟ್ ಆಸೆ ತೋರಿಸಿ ಕರೆವಾಗ, ಅವರ ತೋಳುಗಳಿಗೆ ಜಿಗಿಯುವುದು ಅಂದರೆ ನನಗೆ ತುಂಬಾ ಕುಶಿ. ಅವರು ನನ್ನ ಹಿಡಿದು ಮತ್ತೆ ಮೇಲಕ್ಕೆ ಎಸೆದು ಹಿಡಿದುಕೊಳ್ಳುತ್ತಿದ್ದರು.

ನಮ್ಮ ಊರಲ್ಲಿ ಟೆಂಟ್ ಸಿನೆಮಾ ಮಂದಿರ ಇತ್ತು. ಪ್ರತಿದಿನ ಐದು ಗಂಟೆ ಗೆ ಸರಿಯಾಗಿ, ಗಜ ಮುಖನೆ ಗಣಪತಿಯೇ ನೀನೆಗೆ ವಂದನೆ ಹಾಡನ್ನು  ಲೌಡ್ ಸ್ಪೀಕರ್ ನಲ್ಲಿ ಹಾಕುತ್ತಿದ್ದರು. ಪ್ರತಿ ಶುಕ್ರವಾರ ಹೊಸ ಸಿನಿಮಾ ತೋರಿಸುತಿದ್ದರು, ಒಬ್ಬ ಚಿಕ್ಕ ಹುಡುಗ ಬೈಸಿಕಲ್ ನಲ್ಲಿ ಪೋಸ್ಟರ್ ಹಾಕಿಕೊಂಡು ಹೊಸ ಸಿನಿಮಾದ ಬಗ್ಗೆ ಬರೆದಿರುವ ಚೀಟಿಗಳನ್ನು ಎಸೆಯುತ್ತಾ ಹೋಗುತ್ತಿದ್ದ, ಮಕ್ಕಳಾದ  ನಾವು ಅವನ ಹಿಂದೆ ಓಡಿ ಯಾರು ಮೊದಲು ಚೀಟಿ ಅನ್ನು ರಸ್ತೆ ಯಿಂದ ಆಯದು ಕೊಂಡು ಹೋಗಿ ಅಮ್ಮಅಂದರಿಗೆ ಕೊಡುವುದಕ್ಕೆ ಪೈಪೋಟಿ. ನನ್ನ ಅಮ್ಮನಿಗೆ ಸಿನಿಮಾ ಎಂದರೆ ಹುಚ್ಚು, ನಮ್ಮನ್ನು ಎಲ್ಲಾ ಸಿನಿಮಗಳಿಗೆ ಕರೆದುಕೊಂಡು ಹೋಗುತ್ತಿದ್ದರು, ಕುರ್ಚಿ 50 ಪೈಸೆ, ನೆಲ 25 ಪೈಸೆ, ನೆಲದಲ್ಲಿ ಕುಳಿತುಕೊಳ್ಳವರು, ಅವರೇ ಚಾಪೆ ತರಬೇಕಾಗಿತ್ತು. ಸಿನಿಮಾ ಶುರು ಆದಾಗ ಮಾತ್ರ ಟಿಕೆಟ್ಟು ತೋರಿಸಬೇಕಾಗಿತ್ತು, ವಿರಾಮದ ನಂತರ ಗೇಟ್ ಬಳಿ ಯಾರೂ ಕವಲಿಗೆ ಇರುತ್ತಿರಲಿಲ್ಲ, ಹಾಗಾಗಿ ನಾನು ಗಂಗೆ-ಗೌರಿ ಸಿನಿಮಾನ 4 ಸರಿ ನೋಡಿದ್ದು ಜ್ಞಾಪಕ ಇದೆ. (3 ಸಾರಿ ಅರ್ಧದಿಂದ). ರಾಜ್ ಕುಮಾರ್ ಫೈಟ್ ಯಿಂಗ್ ಸೀನ್  ಬಂದಾಗ, ರಾಜ್ ಕುಮಾರ್ ಗೆಲ್ಲಲಿ ಎಂದು ದೇವರಲ್ಲಿ ಬೇಡಿದ್ದು ಇದೆ.

ನನ್ನ ಈ ಎಲ್ಲಾ ಹುಡುಗಾಟಗಳ ಪರಿಣಾಮ ಅಪಘಾತಗಳು  ಒಂದೇ ಎರಡೇ ..
ನಾನೂ ತುಂಬಾ ಚಿಕ್ಕವಳು ಇದ್ದಾಗ ಒಬ್ಬಳೇ ಸದ್ದಿಲ್ಲದೇ ಆಟ ಆಡಿಕೊಳ್ಳುತ್ತಿದಾಗ, ನನ್ನ ಅಮ್ಮನಿಗೆ ಆಶ್ಚರ್ಯ ಏನು ಸದ್ದೇ  ಇಲ್ಲ ಅಂದುಕೊಳ್ಳುವುದರ ಒಳಗೆ ಸೀಮೆ ಎಣ್ಣೆ ವಾಸನೆ ಬಂದು ಅವರು ಬಂದು ನೋಡಿದರೆ, ನಾನು ಸೀಮೆ ಎಣ್ಣೆ ನ ದೀಪದ ಬುಡ್ಡಿ ತೆಗೆದು ತಲೆಮೇಲೆ ಸುರಿದುಕೊಂಡು ಬೆಂಕಿಪೊಟ್ಟಣ ಹಚ್ಚು ವುದಕ್ಕೆ ಪ್ರಯತ್ನಿಸುತ್ತಿದ್ದನಂತೆ, ದೈವ ವಶಾತ್ ಬೆಂಕಿಪೊಟ್ಟಣವೂ ಒದ್ದೆ ಆಗಿದ್ದರಿಂದ ಬೆಂಕಿ ಹತ್ತಿ ಕೊಳ್ಳಲಿಲ್ಲ. ನನ್ನ ಅಮ್ಮನಿಗೆ ಹೃದಯವೇ ಬಾಯಿಗೆ ಬಂದಹಾಗೆ ಆಯಿತು ಎಂದು ಹೇಳುತಿದ್ದರು.

ನನಗೆ ಸ್ನಾನ ಮಾಡಿಸಿಕೊಳ್ಳುವುದು ಎಂದರೆ ಕಷ್ಟದ ಕೆಲಸ, ನಮ್ಮ ಮನೆ ಕೆಲಸದವಳು ನಾವು ಆಟ ಆಡುವ ಸಮಯ ದಲ್ಲೇ ಎಳೆದು ಕೊಂಡು ಹೋಗುತ್ತಿದ್ದಳು, ಒಂದು  ಸಲ ಅವಳು ನನ್ನನ್ನು ದರ ದರನೆ ಎಳೆದುಕೊಂಡು ಹೋಗುವಾಗ ನಾನು ಅವಳ ಕೈ ಯಿಂದ ಬಿಡಿಸಿಕೊಳ್ಳು ವುದಕ್ಕೆ ಹೋಗಿ, ಕಲ್ಲಿನ ಮೇಲೆ ಬಿದ್ದು ಗಲ್ಲ ಒಡೆದ ಗುರುತು ಮತ್ತು ಹಲ್ಲಿ ನಿಂದ ನಾಲಿಗೆ ಕಚ್ಚಿ, ನಾಲಿಗೆ ಕತ್ತರಿಸಿರುವ ಗುರುತು ಇನ್ನೂ ನನ್ನ ಗಲ್ಲ, ನಾಲಿಗೆ ಮೇಲೆ ಇದೆ.

ನನ್ನ ಅಣ್ಣ ನಿಗೆ ನನ್ನನ್ನು ಗೋಳು ಹುಯುವುದುಕೊಳ್ಳುವುದು  ಎಂದರೆ ಬಲು ಪ್ರಿಯವಾದ ಕೆಲಸ. ಹಿಂದೆಯಿಂದ ಬಂದು ಬೆಚ್ಚಿ ಬಿಳಿಸುವುದು, ವಿನಾಕಾರಣ ವಾಗಿ ಹೊಡೆದು ಓಡಿಬಿಡುವುದು ಮಾಡುತ್ತಿ ದನು. ಆಗ ನಾನು ಅವನನ್ನು ಅಟ್ಟಿಸಿಕೊಡು ಊರೆಲ್ಲ ಓಡುವುದು, ಕೆಲವು ಸಲ ಅವನು ಚರಂಡಿಯನ್ನು ಹಾರಿಬಿಡುತ್ತಿದ್ದ, ಅವನು ನನಗಿಂತ 6 ವರ್ಷ ದೊಡ್ಡವನು, ನಾನು ಅವನು ಹಾರಿದಹಾಗೆ ಹಾರಲು ಪ್ರಯತ್ನಿಸಿ ಚರಂಡಿ ಒಳ್ಳಕ್ಕೆ ಬಿದ್ದು ಹಣೆಯನ್ನು ಎರಡು ಸಾರಿ ಹೊಡೆಸಿಕೊಂಡ ಗುರುತು ಈಗಲು ಇದೆ. ಇದರಿಂದ, ಅಮ್ಮ ನಿಂದ ಅವನಿಗೆ ಬೇಕಾದಷ್ಟು ಏಟು ಬಿದ್ದಿದೆ.

ಒಂದು ದಿನ ನಾನು ನನ್ನ ಸ್ನೇಹಿತೆ ಮನೆಯ ಮೆಟ್ಟಲು ಮೇಲೆ ನಿಂತು ಮನೆ ಹಿಂದೆ ಹಾಕಿದ್ದ  ಚಪ್ಪರದ ತೊಲೆಗೆ ಹಾರಿ ಜೋಕಳೆ ಆಡುತ್ತಿದೆವು, ನಾನು ಆಯಾ ತಪ್ಪಿ ಚಪ್ಪಡಿ ಕಲ್ಲಿನಮೇಲೆ ಬಿದ್ದು, ನನ್ನ ಬಲ ಕೈ  ಅನ್ನು ಮುರಿದು ಕೊಂಡೆ, ಸುಮಾರು ಮದ್ಯಾನ 4 ಗಂಟೆ, ಮನೆಗೆ ಹೋದರೆ ಚೆನ್ನಾಗಿ ಹೊಡಿಯುತ್ತಾರೆ ಅಂತ ಗೊತ್ತಿತ್ತು, ಹಾಗಾಗಿ ಅವರ ಮನೆಯಲ್ಲೇ  ಉಳಿದುಕೊಂಡೆ, ಕೈ ಊದಿಕೊಳ್ಳುವುದಕ್ಕೆ ಶುರು ಆಯಿತು, ನನ್ನ ಸ್ನೇಹಿತರಿಗೆ ಭಯವಾಗಿ, ನನ್ನ ಮನೆಗೆ ಹೋಗಿ ಹೇಳಿದರೆಂದು ಕಾಣುತ್ತೇ, ಮೊದಲು ನಮ್ಮ ಮನೆ ಕೆಲಸದವಳು ಬಂದು ಕರೆದಳು, ನಾನು ಹೋಗಲಿಲ್ಲ, ನನ್ನ ಅಮ್ಮ ಆವತ್ತಿನ ದಿನ ಮಹಿಳಾ ಸಮಾಜಕ್ಕೆ ಹೋಗಿದ್ದರು, ಅಲ್ಲಿಂದ ಬರುವಾಗ ಬಾ ಎಂದು  ಕರೆದರು ಹೋಗಲಿಲ್ಲ, ಮತ್ತು ಅವರಿಗೆ ಬಿದ್ದ ವಿಷಯ ಹೇಳಲಿಲ್ಲ, ಮನೆಗೆ ಹೊಗಿ ಗೊತ್ತಾದ ಮೇಲೆ ಸಮಾದಾನ ಮಾಡಿ ಕರೆದುಕೊಂಡು ಹೋಗಿ ನನ್ನ ತಂದೆಗೆ ಹೇಳಿ ಕಳಿಸಿದರು. ನನ್ನ ತಂದೆ ಕ್ಲಿನಿಕ್ ಅನ್ನು ಮುಚ್ಚಿ ಬಂದವರೆ ನಾಲ್ಕು ಬಾರಿಸಿದರು. ಕೊನೆಗೆ ಒಂದು ಬಟ್ಟೆಯನ್ನು ಮುರಿದ ಕೈ ಗೆ ಕಟ್ಟಿ ಕತ್ತಿನಸುತ್ತಾ ಸುತ್ತಿ (sling) ಪ್ರಥಮ ಶುಶ್ರೂಷೆ ಮಾಡಿದರು . ಅವರಿಗೆ ಬೇಗ ಸಿಟ್ಟು ಬರುತ್ತಿರಲಿಲ್ಲ, ತುಂಬಾ ಸಹನೆ, ತಾಳ್ಮೆ  ಉಳ್ಳವರು, ಯಾವತ್ತೂ ಹೆಣ್ಣುಮಕ್ಕಳ ಮೇಲೆ ಕೈ ಮಾಡಿದ್ದವರಲ್ಲ, ಅವರ ಸಹನೆ, ತಾಳ್ಮೆ ನಾನು ಪರೀಕ್ಷಿಸಿ, ಸಹನೆ ಕಳೆದ (ಕು) ಖ್ಯಾತಿ ನನ್ನದಾಯಿತು. ನನ್ನ ಅಕ್ಕ ತುಂಬಾ ಸೌಮ್ಯ ಸ್ವಭಾವದವಳು, ನನಗೆ ತದ್ವಿರುದ್ದ, ಒಂದು ಕಡೆ ಕೂತರೆ ಆ ಜಾಗ ದಿಂದ ಕದಲುತ್ತಿರಲಿಲ್ಲ. ನನಗಿಂತ ಎರಡು ವರೆ ವರ್ಷ ದೊಡ್ಡವಳು. ನನ್ನ ತಂದೆಯ ಅಚ್ಚುಮೆಚ್ಚಿನ ಮಗಳು. (ಆವಳನ್ನು ಚಿಕ್ಕದರಲ್ಲೇ ಪ್ರೊಫೆಸರ್ ಎಂದು ಕರೆಯುತ್ತಿದ್ದರು, ಅದ್ದಕ್ಕೆ ತಕ್ಕ ಹಾಗೆ ಅವಳು Ph.D. ಮಾಡಿ ಪ್ರೊಫೆಸರ್ ಆದಳು.)
ಮಾರನೆಯ ದಿನ ಬೆಳಿಗ್ಗೆ ನೆ ಮಂಡ್ಯ ಆಸ್ಪತ್ರೆ ಗೆ ನನ್ನನ್ನು  ತಂದೆ ಕರೆದುಕೊಂಡು ಹೋದರು, ಅಲ್ಲಿ ಇದ್ದ ಡಾಕ್ಟರ್ ಗಳು ಅವರಿಗೆ ಪರೀಚಿತರೆ, X-Ray ತೆಗೆದು ನೋಡಿದಾಗ ಮೂಳೆ ಮುರಿದಿರುವುದು ಗೊತ್ತಗಿ, ಆ ದಿನವೇ ಸರ್ಜರೀಗೆ ನನ್ನನ್ನು  ಆಪರೇಷನ್ ಥಿಯೇಟರ್ ಗೆ ನನ್ನ ತಂದೆಯ ಜೊತೆನೇ ಕರೆದುಕೊಂಡು ಹೋದರು. ಡಾಕ್ಟರ್ ನನನಗೆ ಕ್ಲೋರೋಫಾರಂ ಕೊಟ್ಟು 100 ಎಣಿಸಮ್ಮ ಎಂದು ಸ್ವಾಭಾವಿಕ ವಾಗಿ ಹೇಳಿದರು, ನಾನು ೧೦೧ ,೧೦೨ ಅಂತ ೧೫೦ ಎಣಿಸಿದಾಗ, ಅಲ್ಲೇ ನನ್ನ ಪಕ್ಕದಲ್ಲೇ ಕುಳಿತ ತಂದೆಗೆ ಗೇಲಿ ಮಾಡುತ್ತಾ, " ಏನು ಡಾಕ್ಟರ್ ರೇ ನಿಮ್ಮ ಮಗಳು ಇನ್ನೂ ಸಂಕೆ ಎಣಿಸು ತಾನೆ ಇದ್ದಾಳೆ, ಅವಳ ವ್ಯಯಸ್ಸಿನ ಮಕ್ಕಳು ೫೦ ಎಣಿಸುವದರಲ್ಲಿ ನಿದ್ದೆ ಮಾಡಿ ಬಿಡುತ್ತಾರೆ" ಎಂದು.
ಪ್ರತಿ ಒಳ್ಳೆಯ ಅಥವಾ ಕೆಟ್ಟ ದಿನಗಳು  ಕೊನೆ ಕಾಣುವುದು ಎಂದು ಹೇಳುವಹಾಗೆ, ನನ್ನ ಸುಂದರವಾದ  ಹಳ್ಳಿ ಜೀವನ ನನ್ನ ೮ ವಯಸ್ಸಿಗೆ  ಮುಕ್ತಾಯ ಆಯಿತು. ಅದ್ದಕ್ಕೆ ಕಾರಣ ನನ್ನ ತಾಯಿ ತಂದೆಯ ನಗರಕ್ಕೆ ವಲಸೆ ಹೋಗುವ ನಿರ್ದಾರ. ನಮ್ಮನ್ನು ಅಮ್ಮನ ಜೊತೆ ನಗರಕ್ಕೆ ವಿದ್ಯಾಭ್ಯಾಸಕೊಸಕರ ತೀರ್ಮಾನ ಮಾಡಿ, ಮೊದಲು ಮಂಡ್ಯಕ್ಕೆ , ಒಂದು ವರುಷ ಆದಮೇಲೆ ಬೆಂಗಳೂರಿಗೆ ಕರೆದುಕೊಂಡು ಹೋದರು. ನಮ್ಮ ಅಮ್ಮನಿಗೆ ಮಕ್ಕಳಿಗೆ ಆಸ್ತಿ ಕೊಡುವುದಕ್ಕಿಂತ ವಿದ್ಯಾ ಮುಖ್ಯಾ  ಎಂಬ ಧೃಡ ನಂಬಿಕೆ.  ಹೆಣ್ಣು ಮಕ್ಕಳಿಗೆ,  ಗಂಡು ಮಕ್ಕಳಷ್ಟೇ  ವಿದ್ಯ ಬೇಕು ಎಂಬ ಅವರಿಬ್ಬರ ಆದರ್ಶ ನನ್ನ ಮತ್ತು ನನ್ನ ಅಕ್ಕನ  ವಿದ್ಯಾಭ್ಯಾಸಕ್ಕೆ ನಾಂದಿ ಆಯಿತು.  ನಾವಿಬ್ಬರೂ ಈಗಲು ಅವರನ್ನು ನೆನೆಸಿ ಕೊಂಡು ನಮ್ಮ ಕೃತಜ್ಞತೆ ಸಲ್ಲಿಸುತ್ತೇವೆ.



# ವೋಟಿಗಾಗಿ ನೋಟು ಒಂದು ಸದಾ ಕಾಡುವ ಕಾಯಿಲೆ

**ಎಂ.ವಿ. ಶಶಿಭೂಷಣ ರಾಜು.** ನ್ಯೂಜೆರ್ಸಿ.

ಒಂದು ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯು ಮುಂಬರುವ ಚುನಾವಣೆಯಲ್ಲಿ ಮತದಾರರಿಗೆ ಹಣ ಅಥವಾ ಸಂಪನ್ಮೂಲಗಳನ್ನು ಹಂಚಿದಾಗ ಮತದಾರನಿಂದ ಪ್ರತಿಫಲವನ್ನು ಮತದ ಮೂಲಕ ನೀಡುವ ನಿರೀಕ್ಷೆಯೊಂದಿಗೆ ಮತ ಖರೀದಿಯು ಸಂಭವಿಸುತ್ತದೆ. ಮತದ ಖರೀದಿಯು ವಿವಿಧ ರೂಪಗಳಲ್ಲಿರುತ್ತದೆ. ಈ ಅಭ್ಯಾಸವನ್ನು ಸಾಮಾನ್ಯವಾಗಿ ಚುನಾವಣೆಗಳಿಗೆ ಮತ್ತು ನಿರ್ದಿಷ್ಟ ರೀತಿಯಲ್ಲಿ ಮತ ಚಲಾಯಿಸಲು ಮತದಾರರನ್ನು ಪ್ರೇರೇಪಿಸಲು ಅಥವಾ ಮನವೊಲಿಸಲು ಬಳಸಲಾಗುತ್ತದೆ. ಅನೇಕ ದೇಶಗಳಲ್ಲಿ ಈ ಅಭ್ಯಾಸವು ಕಾನೂನುಬಾಹಿರವಾಗಿದ್ದರೂ, ಅದು ಪ್ರಪಂಚದಾದ್ಯಂತ ಉಳಿದಿದೆ.

ಮತ ಖರೀದಿಯು ಅನೇಕ ಋಣಾತ್ಮಕ  ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.  ಪ್ರಜಾಪ್ರಭುತ್ವ ದೇಶಗಳಲ್ಲಿ ಮತ ಖರೀದಿ ಅನೇಕ ಅಪಾಯಗಳನ್ನು ಉಂಟುಮಾಡುತ್ತದೆ ಹಾಗು ಇದು ಅತ್ಯಂತ ಸಮಸ್ಯಾತ್ಮಕವಾಗಿದೆ. ಏಕೆಂದರೆ ಭ್ರಷ್ಟ ರಾಜಕಾರಣಿಗಳು ಮತ ಖರೀದಿಯಲ್ಲಿ ತೊಡಗಿದರೆ, ಅವರ ಹಿತಾಸಕ್ತಿಗಳೇ ದೇಶವನ್ನು ಹೇಗೆ ನಡೆಸಬೇಕೆಂದು ನಿರ್ದೇಶಿಸುತ್ತವೆ. ಇದು ವ್ಯವಸ್ಥೆಯಲ್ಲಿ ಭ್ರಷ್ಟಾಚಾರವನ್ನು ಶಾಶ್ವತಗೊಳಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗಳೇ ಮುಖ್ಯವಾಗಿರುವುದರಿಂದ, ಭ್ರಷ್ಟರು ತಮಗೆ ಬೇಕಾದಷ್ಟು ಮತಗಳನ್ನು ಖರೀದಿಮಾಡಿ ಅಧಿಕಾರಕ್ಕೆ ಏರುತ್ತಾರೆ. ಆದರೆ ದೇಶದ ಅರ್ಧಜನರ ಬೆಂಬಲ ಅಂತಹ ಸರ್ಕಾರಕ್ಕೆ ಇರದಿದ್ದರೂ, ಭ್ರಷ್ಟಾಚಾರಕ್ಕೆ ಅವರೂ ಬಲಿಪಶುಗಳಬೇಕಾಗುತ್ತದೆ.

ಹಾಗಾದರೆ ಇಂತಹ ಸನ್ನಿವೇಶಕ್ಕೆ ಯಾರು ಕಾರಣರು? ರಾಜಕಾರಣಿಗಳೇ ಅಥವಾ ಮತದಾರರೇ?

ರಾಜಕಾರಣವನ್ನು ಅಧಿಕಾರ ರೂಪದಲ್ಲಿ, ಹಣದ ರೂಪದಲ್ಲಿ ನೋಡದ ಹಿಂದಿನ ಕಾಲದಲ್ಲಿ ಜನರೇ ಚುನಾವಣೆಗೆ ನಿಲ್ಲಲು ಹಣ ಕೊಟ್ಟ ನಿದರ್ಶನಗಳಿವೆ.  ಸರ್ಕಾರದಲ್ಲಿ ಇರುವುದು ಹಣ ಮಾಡುವುದಕ್ಕೆ ಒಂದು ವಿಧಾನ ಎಂದು ಅರಿವಿಗೆ ಬಂದ ದಿನದಿಂದ ಭ್ರಷ್ಟ ರಾಜಕಾರಣಿಗಳು ಹಣಮಾಡಲು ತೊಡಗುವುದಲ್ಲದೇ ಅದನ್ನು ಪ್ರದರ್ಶಿಸಲು ಶುರುಮಾಡಿದರು. ತಾವು ಮಾಡಿದ ಹಣವನ್ನು ತಮ್ಮ ಬೆಂಬಲಿಗರಿಗೆ ಕೊಡತೊಡಗಿದರು. ಇದರಿಂದ ರಾಜಕಾರಣಿಗಳು ಚನ್ನಾಗಿ ಹಣ ಮಾಡುತ್ತಾರೆ ಎಂದು ಜನರಿಗೆ ಮನವರಿಕೆಯಾಯಿತು. ಹೀಗಾದಾಗ, ರಾಜಕಾರಣಿಗಳು ಚುನಾವಣಾ ಪ್ರಚಾರಕ್ಕೆ ಬಂದಾಗ ಬಡವರು ಹಣಕ್ಕೆ ಕೈ ಚಾಚಿರಬೇಕು (ವೋಟಿಗಾಗಿ ಅಲ್ಲ ), ಬಡವರ ಅಸಹಾಯಕತೆಯನ್ನು ದುರ್ಬಳಿಕೆ ಮಾಡಿಕೊಂಡ ರಾಜಕಾರಣಿಗಳು ಕ್ರಮೇಣ ಅದನ್ನು ವೋಟು ಗಳಿಸುವ ಅಸ್ತ್ರ ಮಾಡಿಕೊಂಡರು. ಒಂದು ವೇಳೆ ರಾಜಕಾರಣಿಗಳು ಯಾವುದೇ ಆಸ್ತಿ, ಹಣ ಮಾಡಿಕೊಳ್ಳದೆ, ಅವರು ಮೊತ್ತೊಂದು ಸರ್ಕಾರಿ ಉದ್ಯೋಗಿಯಂತೆ, ಬಂದ ಹಣದಲ್ಲಿ ಜೀವನ ನಡೆಸುತ್ತಿದ್ದರೆ, ಅವರ ಹತ್ತಿರ ನೀಡಲು ಹಣ ಇಲ್ಲ ಎಂದು ಜನ ಅರಿತಿದ್ದರೆ, ಯಾರೂ ಹಣ ಕೇಳಲಾರರು. ಇಂತಹ ಒಳ್ಳೆಯ ರಾಜಕಾರಣಿಯ ವ್ಯಚ್ಚಕ್ಕೆ ಜನರೇ ಹಣ ಕೊಡುತಾರೆ.



ಹೀಗೆ ಉಗಮವಾದ ನೋಟಿಗೆ ವೋಟು ಎನ್ನುವ ಪ್ರಹಸನ, ಅನಿವಾರ್ಯ, ಅಭ್ಯಾಸವಾಗಿ ರಾಜಕಾರಣದ ಅಂಗವಾಗಿ ಉಳಿದುಹೋಯಿತು. ಸದಾ ಬಡತನದಲ್ಲಿ ಇರುವ ಜನ, ಯಾವುದೇ ರೂಪದಲ್ಲಿ ಸಹಾಯ ಸಿಕ್ಕಿದರೆ ಅದನ್ನು ತಿರಸ್ಕರಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಅನೇಕ ಪಕ್ಷಗಳು, ಅನೇಕ ಅಭ್ಯರ್ಥಿಗಳು ಇರುವುದರಿಂದ, ಎಲ್ಲರಿಂದಲೂ ಹಣ, ಉಡುಗೊರೆ ಹೀಗೆ ಏನಾದರೂ ಸಿಗುವುದರಿಂದ, ತಾವು ಗೆಲ್ಲಿಸುವ ವ್ಯಕ್ತಿಯಿಂದ ನೇರವಾಗಿ ತಮಗೆ ಯಾವುದೇ ಉಪಯೋಗವಾಗುವುದಿಲ್ಲ ಅಂದು ಅರಿತಿರುವುದರಿಂದ, ಚುನಾವಣೆ ಸಮಯದಲಿ ಸಿಕ್ಕ ಹಣದಲ್ಲಿ ಸುಖ ಕಂಡುಕೊಳ್ಳುತ್ತಾರೆ. ತಾವು ಹಾಕುವ ವೋಟಿನ ಮಹತ್ವ ಕೆಲವೇ ಕೆಲ ಜನಗಳಿಗೆ ಗೊತ್ತಿರುತ್ತದೆ, ಆದರೆ ಈ ಜನ ಸಿನಿಕರಾಗಿರುತ್ತಾರೆ. ಎಲ್ಲರ ಹತ್ತಿರ ಹಣ, ಉಡುಗೊರೆ ತೆಗೆದುಕೊಂಡರೂ ಜನ ಆಡಳಿತ ವಿರೋಧಿ ಮನದಿಂದಲೋ, ರಾಜಕಾರಣದ ಗಾಳಿ ಬೀಸುವ ದಿಕ್ಕುವ ಅರಿವಿನಿಂದಲೋ, ಮಾಧ್ಯಮಗಳ ಬ್ರೈನ್ ವಾಷ್ ನಿಂದಲೋ, ಜನರಾಡುವ ಮಾತುಗಳಿಂದಲೋ, ಜಾತಿ, ಧರ್ಮಗಳಿಂದಲೋ ಪ್ರೇರಿತರಾಗಿ ಯಾವೂದೋ ಒಂದು ಪಕ್ಷಕ್ಕೆ ಮತ ಹಾಕುತ್ತಾರೆ. ಈ ರೀತಿಯ ಒಂದೇ  ರೀತಿ ಯೋಚಿಸುವ ಗುಣದಿಂದ ಸಾಮಾನ್ಯವಾಗಿ ಯಾವುದಾದರೂ ಒಂದು ಪಕ್ಷಕ್ಕೆ ಬಹುಮತ ಬರುತ್ತದೆ.

ಭಾರತೀಯರಿಗಿರುವ ಒಂದು ವಿಶೇಷ ಗುಣವೆಂದರೆ,ಯಾರಿಂದ ಹೆಚ್ಚು ಸಹಾಯ ಒದಗಿರುತ್ತದೆಯೋ ಅವರಿಗೆ ಸಾಮಾನ್ಯವಾಗಿ ಮೋಸ ಮಾಡುವುದಿಲ್ಲ, ಆದ್ದರಿಂದ ರಾಜಕಾರಣಿಗಳು ಒಬ್ಬರಿಗಿಂತ, ಒಬ್ಬರು ಚುನಾವಣೆಗಳಲ್ಲಿ ಹೆಚ್ಚು ಹೆಚ್ಚು ಹಣ ಚೆಲ್ಲುವುದು. ಅಷ್ಟು ಹಣ ಚೆಲ್ಲಿ ಗೆದ್ದಮೇಲೆ ಅದನ್ನು ಹೇಗಾದರೂ ಮಾಡಿ ಸಂಪಾದಿಸಿಕೊಳ್ಳಲೇ ಬೇಕು, ಗೆದ್ದಮೇಲೆ ಪಕ್ಷಾಂತರ ಮಾಡಿಯಾದರೂ ಅದನ್ನು ಸಾಧ್ಯಮಾಡಿಕೊಳ್ಳುತ್ತಾರೆ. ಇದೊಂದು ವಿಷ ವರ್ತುಲದಲ್ಲಿ  ಪ್ರಜಾಪ್ರಭುತ್ವ ಸಿಕ್ಕಿಹಾಕಿಕೊಂಡಿದೆ.

ಹಣ, ಜಾತಿ, ಧರ್ಮದ ಆಧಾರದಲ್ಲಿ ನಡಯುವ ಚುನಾವಣೆಗಳಿಂದ, ಪಕ್ಷಗಳಿಗೆ ಗೆಲ್ಲುವುದು ಹೇಗೆಂದು ತಿಳಿದುಬಿಟ್ಟಿದೆ, ಯಾವುದೇ ಅಭಿವೃದ್ಧಿಮಾಡದೆ, ಚುನಾವಣೆ ಸಮಯದಲ್ಲಿ ಹಣ ಚೆಲ್ಲಿಯೋ, ಜಾತಿ ಆಧಾರದ ಮೇಲೆಯೋ, ಧರ್ಮದ ಆಧಾರದಲ್ಲೂ, ಯಾವುದಾದರೂ ಭಾವನಾತ್ಮಕ ವಿಚಾರ ತಂದೋ ಗೆಲ್ಲುವುದು ಸುಲಭವಾಗುತ್ತಿದೆ. ಹೀಗೆ ಗೆದ್ದ ಪಕ್ಷ ಅಭಿವೃದ್ಧಿ ಕೆಲಸ ಮಾಡುವ ಅವಶ್ಯಕತೆಯೇ ಬರುವುದಿಲ್ಲ.

ಚುನಾವಣೆ ಸಮಯದಲ್ಲಿ ಜನ ತೆಗೆದುಕೊಳ್ಳುವ ಹಣ ವೋಟಿಗೋಸ್ಕರ ಎನ್ನುವ ಹಾಗಿಲ್ಲ, ಬೇರೆ ಸಮಯದಲ್ಲಿ ರಾಜಕಾರಣಿಗಳು ಹಣ ಕೊಟ್ಟರೂ ಜನ ತೆಗೆದು ಕೊಳ್ಳುತ್ತಾರೆ. ಸರ್ಕಾರಗಳು ಜನರನ್ನು ಬಡವರನ್ನಾಗೇ ಉಳಿಸಿರುವುದರ ಫಲವಿದು. ಉಚಿತ ಹಣ ಸಿಕ್ಕರೆ ಬೇಡ ಎನ್ನುವ ಮನಗಳು ಸಾಮಾನ್ಯವಾಗಿ ಅತೀವಿರಳ. ಹಣ ಎಲ್ಲರಿಗೂ ಬೇಕು, ಅದರಲ್ಲೂ ಭ್ರಷ್ಟಾಚಾರ ಮಾಡಿಗಳಿಸಿದ ಹಣದ ಪಾಲು ತಮಗೆ ಸಿಕ್ಕಿದರೆ ತಪ್ಪೇನು ಎಂದುಕೊಳ್ಳುವವರೇ ಹೆಚ್ಚು.  ರಾಜಕಾರಣಿಗಳೆಲ್ಲರೂ ಭ್ರಷ್ಟರೇ ಎಂಬ ಸಾರ್ವಜನಿಕ ನಂಬಿಕೆಯ ಫಲವಿದು.

ಮತ ಖರೀದಿಯ ಅಭ್ಯಾಸಕ್ಕೆ ವಿದ್ವಾಂಸರು ಹಲವಾರು ಋಣಾತ್ಮಕ ಪರಿಣಾಮಗಳನ್ನು ಪಟ್ಟಿ ಮಾಡಿದ್ದಾರೆ. ಪ್ರಜಾಸತ್ತಾತ್ಮಕ ದೇಶಗಳಲ್ಲಿ ಮತ ಖರೀದಿಯ ಉಪಸ್ಥಿತಿಯು ಪ್ರಜಾಪ್ರಭುತ್ವಕ್ಕೆ ಅಪಾಯವನ್ನುಂಟುಮಾಡುತ್ತದೆ, ಏಕೆಂದರೆ ಇದು ಸಂಭಾವ್ಯ ಸರ್ಕಾರಗಳ ನೀತಿಗಳಿಗೆ ಜನರ ಬೆಂಬಲದ ಅಳತೆಯಾಗಿ ಜನಪ್ರಿಯ ಮತವನ್ನು ಅವಲಂಬಿಸುವ ಸಾಮರ್ಥ್ಯವನ್ನು ಅಡ್ಡಿಪಡಿಸುತ್ತದೆ. ಮತ್ತೊಂದು ಗಮನಾರ್ಹ ಪರಿಣಾಮವೆಂದರೆ ಮತದಾರರ ಸ್ವಾಯತ್ತತೆಗೆ ಧಕ್ಕೆಯುಂಟಾಗಿದೆ. ಹಣ ಪಡೆಯುವುದರಿಂದ ಅಥವಾ ಅವರ ಮತಗಳಿಗೆ ಬಹುಮಾನಗಳನ್ನು ಪಡೆಯುವುದರಿಂದ ಅವರು ತಮ್ಮನ್ನು ಅಥವಾ ಅವರ ಕುಟುಂಬಗಳನ್ನು ಪೋಷಿಸಲು ಅಗತ್ಯವಿರುವ ಆದಾಯದ ರೂಪವನ್ನು ಸೃಷ್ಟಿಸುವುದರಿಂದ, ಅವರು ನಿಜವಾಗಿಯೂ ಬಯಸುವ ಪಕ್ಷಕ್ಕೆ ಮತವನ್ನು ಚಲಾಯಿಸಲು ಅವರಿಗೆ ಯಾವುದೇ ಸ್ವಾಯತ್ತತೆ ಇರುವುದಿಲ್ಲ.

ಅಂದರೆ, ಇದಕ್ಕೆ ಅಂತ್ಯವೇ ಇಲ್ಲವೇ?

ಜನ ಬಡವರಾಗಿಯೇ ಉಳಿಯುವುದರಿಂದ, ಆದಾಯ ಸೃಷ್ಟಿ ಇಲ್ಲದಿದ್ದಾಗ ಉಚಿತ ಕೊಡುಗೆಗಳಿಗೆ ಜನ ಕೈ ಚಾಚಿಯೇ ಚಾಚುತ್ತಾರೆ. ಜನರನ್ನು ಭ್ರಷ್ಟರು ಎನ್ನುವುದು ಸರಿಯಲ್ಲ. ಜನರ ಅಸಹಾಯಕತೆ ಹಣಕ್ಕೆ, ಕೊಡಿಗೆಗಳಿಗೆ ಕೈ ಚಾಚುವಂತೆ ಮಾಡುತ್ತದೆ. ಇಂದಿನ ರಾಜಕಾರಣ ಅಧಿಕಾರ, ಹಣ ಮಾಡುವುದಕ್ಕೆ ಸೀಮಿತವಾಗಿರುವುದರಿಂದ, ಚುನಾವಣೆಯಲ್ಲಿ ಗೆಲ್ಲುವುದೊಂದೇ ಮಾನದಂಡವಾಗಿರುವುದರಿಂದ , ಹೇಗೆ ಎನ್ನುವುದಕ್ಕೆ ಅಡ್ಡಿಗಳೇನೂ ಇಲ್ಲವಾದ್ದರಿಂದ, ಚುನಾವಣೆ ಗೆಲ್ಲಲು ಇರುವ ಎಲ್ಲ ಮಾರ್ಗಗಳನ್ನೂ ರಾಜಕಾರಣಿಗಳು ಬಳಸಿಕೊಳ್ಳುತ್ತಾರೆ.

ಇದಕ್ಕೆ ಇರುವ ಮಾರ್ಗವೆಂದರೆ ರಾಜಕಾರಣಿಗಳಲ್ಲಿನ ಬದಲಾವಣೆ, ಎಲ್ಲಾ ಪಕ್ಷಗಳೂ ಸೇರಿ ನಾವು ಚುನಾವಣೆಯಲ್ಲಿ ಹಣ ಚೆಲ್ಲುವುದಿಲ್ಲ ಎಂದು ಪ್ರಜ್ಞಾಪೂರ್ವಕವಾಗಿ ತೀರ್ಮಾನಿಸಬೇಕು, ಹಾಗೆ ನಡೆದುಕೊಳ್ಳಬೇಕು, ಚುನಾವಣಾ ಪ್ರಚಾರಕ್ಕೆ ತಂತ್ರಜ್ಞಾನ ಬಳಸಿಕೊಳ್ಳಬೇಕು.  ಹಾಗಾದಾಗ ಅವರ ಚುನಾವಣಾ ವ್ಯಚ್ಚವೂ ಕಡಿಮೆಯಾಗುತ್ತದೆ, ಹಣವಿಲ್ಲದವರೂ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವೂ  ಸಿಗುತ್ತದೆ. ಮನ ಪರಿವರ್ತನೆಯಾಗದೆ ಕಾನೂನಿಂದ ಬದಲಾವಣೆ ತರಲಾಗದು. ರಾಜಕಾರಣಿಗಳ ಮನ ಪರಿವರ್ತನೆ ಆಗುವುದು ಸಾಧ್ಯವಿಲ್ಲವಾದ್ದರಿಂದ ವೋಟಿ ಗಾಗಿ ನೋಟು ಎಂಬ ಪ್ರಕ್ರಿಯೆ ಸದಾಕಾಲ ಇರುತ್ತದೆ.



# ಬರ್ಮುಡಾ ಟ್ರಯಾಂಗಲ್ ನ ರಹಸ್ಯವೇನು?

**ಯಶಸ್ವಿನಿ.** *ನ್ಯೂಜೆರ್ಸಿ*

ಜಗತ್ತಿನಲ್ಲಿ ಬಗೆಹರಿಯದ ಅನೇಕ ಸಮಸ್ಯೆಗಳಿವೆ, ಅದರಲ್ಲಿ  ಬರ್ಮುಡಾ ಟ್ರಯಾಂಗಲ್ ನ ರಹಸ್ಯವೂ ಒಂದು,ಉತ್ತರ ಅಟ್ಲಾಂಟಿಕ್ ಮಹಾಸಾಗರದ ಪಶ್ಚಿಮ ಭಾಗದಲ್ಲಿ ಬರ್ಮುಡಾ ಟ್ರಯಾಂಗಲ್ ಎಂಬ ಪ್ರದೇಶವು ಕಂಡು ಬರುತ್ತದೆ."ಡೆವಿಲ್ಸ್ ಟ್ರಯಾಂಗಲ್ ""ಭೂತದ ತ್ರಿಕೋನ"ಎಂದು ಸಹ ಕರೆಯಲ್ಪಡುವ ಬರ್ಮುಡಾ ಟ್ರಯಾಂಗಲ್ ತನ್ನ ನಿಗೂಢತೆಯಿಂದ ಜಗತ್ತಿನ ಕುತೂಹಲಕ್ಕೆ ಕಾರಣವಾಗಿದೆ. ಫ್ಲೋರಿಡಾ, ಬರ್ಮುಡಾ, ಪೋರ್ಟೊ ರಿಕೊ ನಡುವೆ ತ್ರಿಭುಜಾಕಾರದಲ್ಲಿ ಇರುವ ಪ್ರದೇಶವನ್ನು ಬರ್ಮುಡಾ ಟ್ರಯಾಂಗಲ್ ಎಂದು ಕರೆಯುತ್ತಾರೆ.ಈ ಸ್ಥಳದ ಸಮೀಪ ಬಂದ ಕೂಡಲೇ ಹಡಗುಗಳು,ವಿಮಾನಗಳು ಶಾಶ್ವತವಾಗಿ ಕಣ್ಮರೆಯಾಗುತ್ತವೆ, ಅವಶೇಷಗಳು ಸಹ ಸಿಗದ ರೀತಿಯಲ್ಲಿ!! ಡಿಸೆಂಬರ್ 5,1945 ರಂದು ಅಮೆರಿಕಾದ ವಾಯುಪಡೆಗೆ ಸೇರಿದ್ದ ಐದು ವಿಮಾನಗಳು ಈ ಬರ್ಮುಡಾ ಟ್ರಯಾಂಗಲ್ ನ ಪ್ರದೇಶದಲ್ಲಿ ತರಬೇತಿಗಾಗಿ ಹಾರಾಟ ನಡೆಸುತ್ತಿದ್ದಾಗ ಆ ಐದು ವಿಮಾನಗಳು ನಿಗೂಢ ರೀತಿಯಲ್ಲಿ ನಾಪತ್ತೆಯಾದವು,ಸುಮಾರು ಹದಿಮೂರು ಮಂದಿ ವಿಮಾನಗಳಲ್ಲಿ ಇದ್ದವರು ಕಣ್ಮರೆಯಾದರು. 1919ರಲ್ಲಿ ಮ್ಯಾಂಗನೀಸ್ ತುಂಬಿದ ಹಡಗು ಮುಳುಗಿತು. ನಂತರ 1949 ರ ಇಸವಿಯಲ್ಲೂ ಸಹ ಒಂದು ಪ್ರಯಾಣಿಕ ವಿಮಾನ ಕಣ್ಮರೆಯಾಯಿತು. ಕ್ರಿಸ್ಟೋಫರ್ ಕೊಲಂಬಸ್ 1492 ರಲ್ಲಿ ಭಾರತವನ್ನು ಹುಡುಕಿಕೊಂಡು ಬರುತ್ತಿದ್ದಾಗ ಅಟ್ಲಾಂಟಿಕ್ ಮಹಾಸಾಗರದ ಮಾರ್ಗವಾಗಿ ಚಲಿಸುತ್ತಾನೆ. ಆಗ ಬರ್ಮುಡಾ ಟ್ರಯಾಂಗಲ್ ನ ಪ್ರದೇಶಕ್ಕೆ ಬರುತ್ತಿದ್ದಂತೆ ವಿಚಿತ್ರವಾದ ಬೆಳಕಿನ ಉಂಡೆಯೊಂದು ಕಾಣಿಸಿತು ಹಾಗೂ ಆತನ ದಿಕ್ಸೂಚಿಗಳು ವಿಚಿತ್ರವಾಗಿ ವರ್ತಿಸಲು ಆರಂಭಿಸಿದವು ಎಂದು ಆತ ತನ್ನ ಪುಸ್ತಕವೊಂದರಲ್ಲಿ ಬರೆದುಕೊಂಡಿದ್ದಾನೆ.

ಧನ್ಯವಾದಗಳು!!





ಲ್ಯಾರಿ ಕುಸ್ಚೆ (Larry kusche) ಎಂಬುವವರು 1975 ರಲ್ಲಿ "ಬರ್ಮುಡಾ ಟ್ರಯಾಂಗಲ್ ಮಿಸ್ಟರಿ ಸಾಲ್ವ್ಡ್" (bermuda triangle mystery solved) ಎಂಬ ಪುಸ್ತಕ ಬರೆದಿದ್ದರೂ ಆತ ಪ್ರಕಟಿಸಿರುವ ವಿಷಯಗಳ ಬಗ್ಗೆ ಸಾಕಷ್ಟು ಸಂದೇಹಗಳು ಮತ್ತು ವಿರೋಧ ಹೇಳಿಕೆಗಳು ಸಾಕಷ್ಟಿವೆ. 1918 ಕ್ಕೂ ಮೊದಲು ಬರ್ಮುಡಾ ಟ್ರಯಾಂಗಲ್ ಎಂಬ ಹೆಸರನ್ನು ಅಷ್ಟಾಗಿ ಯಾರೂ ಕೇಳಿದವರಿರಲಿಲ್ಲ,1918 ರಲ್ಲಿ ಮೊದಲನೆ ಹಡಗು ಮುಳುಗಿದ್ದು ಎನ್ನಲಾಗುತ್ತದೆ,ಅದರಲ್ಲಿದ್ದ 306 ಸಿಬ್ಬಂದಿಗಳು ಕಣ್ಮರೆಯಾಗಿ ಹೋಗಿದ್ದರು, ಹಡಗಿನಲ್ಲಿ ಅಂದು ಹನ್ನೊಂದು ಸಾವಿರ ಟನ್ ಗಳಷ್ಟು ಇದ್ದಲನ್ನು ಸಾಗಿಸಲಾಗುತ್ತಿತ್ತು ಎನ್ನಲಾಗುತ್ತದೆ, ಕೆಲವರು ಇದು ಸರಕು ಓವರ್‌ಲೋಡ್ ಆಗಿದ್ದರಿಂದ ಮುಳುಗಿತು ಎಂದು ವಾದಿಸಿದರೂ ಯಾವ ಅವಶೇಷಗಳು ಸಿಗದೆ ಹೋದದ್ದು ವಿಶ್ವಕ್ಕೆ ಅಚ್ಚರಿಯುಂಟುಮಾಡಿತು. ಅದು ಮೊದಲನೆ ವಿಶ್ವ ಯುದ್ಧ ನಡೆಯುತ್ತಿದ್ದ ಸಮಯ.ಈ ಘಟನೆಯ ನಂತರ ಬರ್ಮುಡಾ ಟ್ರಯಾಂಗಲ್ ವಿಶ್ವದ ಗಮನವನ್ನು ಸೆಳೆಯಿತು. ಎಷ್ಟೋ ಊಹಾಪೋಹಗಳು ಬರ್ಮುಡಾ ಟ್ರಯಾಂಗಲ್ ನ ಬಗ್ಗೆ ಹುಟ್ಟಿಕೊಂಡಿವೆ. ವಿಜ್ಞಾನಿಗಳು ಈ ಬಗ್ಗೆ ಸಂಶೋಧನೆಯನ್ನು ಮುಂದುವರೆಸಿದ್ದಾರೆ. ಕೆಲವರ ಅಭಿಪ್ರಾಯದ ಪ್ರಕಾರ ಅಟ್ಲಾಂಟಿಕ್ ಮಹಾಸಾಗರದಲ್ಲಿ ಮೀಥೇನ್ ಹೈಡ್ರೇಟ್ ಅಂಶ ಹೆಚ್ಚಾಗಿದ್ದು ಅದು ಉಂಟುಮಾಡುವ ಮೀಥೇನ್ ಗುಳ್ಳೆಗಳು (methane bubbles) ನಿಂದ ಹೀಗಾಗುತ್ತದೆ ಎಂದರೆ ಇನ್ನೂ ಕೆಲವರು ಇದು ಏಲಿಯನ್ ಗಳ ವಾಸಸ್ಥಾನ ವಾಗಿದ್ದು ಅಲ್ಲಿಗೆ ಮಾನವರು ಬರುವುದನ್ನು ಅವು ಇಷ್ಟಪಡುವುದಿಲ್ಲ ಹಾಗಾಗಿ ಇದು ಏಲಿಯನ್ ಗಳ ಕೆಲಸ ಎನ್ನುತ್ತಾರೆ, ಇನ್ನೂ ಕೆಲವರು ಹೇಳುವುದೇನೆಂದರೆ ಅಲ್ಲಿ ಅಗೋಚರ ಶಕ್ತಿಗಳಿದ್ದು ಎಲ್ಲವನ್ನು ನುಂಗುವ ಸಾಮರ್ಥ್ಯ ಅವಕ್ಕಿದೆ ಎಂದೂ ಹೇಳುತ್ತಾರೆ,ಅದು ಮತ್ತೊಂದು ಲೋಕದ ಬಾಗಿಲು ಹಾಗಾಗಿ ಅಲ್ಲಿ ಹೋದವರು ಬೇರೆ ಲೋಕಕ್ಕೆ ಹೋಗುತ್ತಾರೆ ಎಂದೂ ಹೇಳುತ್ತಾರೆ, ಒಟ್ಟಿನಲ್ಲಿ ಹಡಗು ಹಾಗೂ ವಿಮಾನಗಳ ಕಣ್ಮರೆಗೆ ನಿಖರ ಕಾರಣವೇನೆಂದು ಇದುವರೆಗೂ ಕಂಡು ಹಿಡಿಯಲಾಗಿಲ್ಲ. ಇದುವರೆಗೂ ಬರ್ಮುಡಾ ಟ್ರಯಾಂಗಲ್ ನ ರಹಸ್ಯ ಜಗತ್ತಿನ ರಹಸ್ಯಗಳಲ್ಲಿ ಒಂದಾಗಿದೆ.ವಿಜ್ಞಾನಿಗಳು ಸಂಶೋಧನೆಯನ್ನು ಮುಂದುವರೆಸುತ್ತಲೇ ಇದ್ದಾರೆ.



# ಕವನಗಳು

## ಚೈತ್ರದ ಭೃಂಗ.....

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



## ಮುತ್ತು ರಾಮಸ್ವಾಮಿ

ಶ್ರೀ ಕನ್ನಡಾಂಬೆಯು ಕೆತ್ತಿರುವ
ದಿವ್ಯಾಕ್ಷರಗಳು ಕನ್ನಡವು

ಶ್ರೀ ಕನ್ನಡಾಂಭೆಯು ಕೆತ್ತಿರುವ /
ದಿವ್ಯಾಕ್ಷರಗಳು ಕನ್ನಡವು/
ಸಜ್ಜನ ಸುಸಂಸ್ಕೃ ತ ಸುಚರಿತ
ಸುಶೀಲತೆಯ ಶ್ರೀಗಂಧವು/

ಶ್ರೀ ಕನ್ನಡಾಂಭೆಯು ಕೆತ್ತಿರುವ
ದಿವ್ಯಾಕ್ಷರಗಳು ಕನ್ನಡವು/
ಸಗ್ಗದಲ್ಲಿ ಶೃಜಿಸಿದ ಸುರರು
ಸಂವಾದಿಸುವ ಸಿರಿಸೌರಭವು//

ಸಾದು ಸಂತರ ಸುಭಾಷಿತಗಳ
ಸಿಂಪಡಿಸುವ ಸೌಂದರ್ಯವು/
ಮನಸೆಳೆವ ಮನಮುಟ್ಟುವ/
ಮೈಮರೆಸುವ ಮನಮೋಹಕವು/

ಕವಿಗಳು ಕಲ್ಪಿಸುವ ಕಾವ್ಯಕವನ /
ಕವಿತೆಗಳ ಕಂದರ ಕಲ್ಪತರುವು
ಶ್ರೀಶಾರದೆಯು ಶೃಷ್ಟಿಸಿರುವ
ಸಿಂಗಾರ ಶೃಂಗಾರ ಸಿರಿಗನ್ನಡವು /

ಪಂಪ ಪರಂಪರೆಯ ಪ್ರವಹಿಸುವ
ಪ್ರಫುಲ್ಲ ಪ್ರಸನ್ನತೆಯ ಪರಿಪೂರ್ಣವು/
ಸುಸ್ವರಗಳ ಸುಶ್ರಾವ್ಯ ಶ್ರುತಿಗಳ
ಸಂಗೀತ ಸುಮದುರ ಸಾರಸತ್ವವು /

ಸೊಬಗು ಸೊಗಸಿನ ಸುಲಲಿತ/
ಸುವಾಸನೆಯ ಶ್ರೀಮದ್ ಸಂಪನ್ನ ವು /
ಶ್ರೀಭುವನೇಶ್ವರಿಯ ಬಂಗಾರ ಬಂಡಾರದ
ಬೃಹನ್ನತೆಯ ಬರಹದ ಬೃಹದಾಕಾರವು/

ರಚಿಸಿದರು ರಾಮಾಯಣವ ರಮ್ಯತೆಯ ರಸಬಾವದಲ್ಲಿ
ರಚಿಸಿದರು ರಾಮಾಯಣವ ರಮ್ಯತೆಯ ರಸಬಾವದಲ್ಲಿ/
ವಾಲ್ಮಿಕಿಯ ಮಹಗಾನವನ್ನು ಮಹಾಛಂದಸ್ಸಿನ ಶೈಲಿಯಲ್ಲಿ/
ರಚಿಸಿದರು ರಾಮಾಯಣವ ರಮ್ಯತೆಯ ರಸಬಾವದಲ್ಲಿ/
ವಿನೂತನ ವಿಶಿಷ್ಟ ನವೀನ ಗಹನತೆಯ ಶಿರೋಬೂಷಣದಲ್ಲಿ/
ಪರಮ ಪುರುಷೋತ್ತಮನ ನಲ್ವರಕೆಯಲ್ಲಿ ಜನಿಸಿದ ವಿಶ್ವಕವಿ/
ಬೃಹತ್ ಕೃತಿಗಳನು ರಸವತ್ತಾಗಿ ಶೃಜಿಸಿಲು ಸಂಭವಿಸಿದ ಕಬ್ಬಿಗ
ಅವ್ಯಕ್ತ ದೈವತ್ವವ ಸಾಹಿತ್ಯದಲ್ಲಿ ರೂಪಿಸಲು ಹುಟ್ಟಿದ ರಸಕವಿ
ಬ್ರಹ್ಮಾನಂದವ ಲೋಕದಲ್ಲಿ ಪ್ರಸರಿಸಲು ಉದಿಸಿದ ಕಟ್ಟೊರೆಗ
ವಾಲ್ಮೀಕಿಗೆ ವಿನಂತಿಸಿದರು ಕೃಪೆಯಲಿ ಕರುಣಿಸಲು ಚೈತನ್ಯವ/
ಮಹಾಕಾವ್ಯವ ಪಾವನದಲಿ ಬರೆಯಲು ಆಶೀರ್ವದಿಸಿರೆಂದು
ವಾಲ್ಮೀಕಿಗೆ ಗುರುವಂದನೆ ಅರ್ಪಿಸಿದರು ಶಿಷ್ಯನಾಗಿ ಸನ್ಮಾನವ
ಅಮರಕಾವ್ಯವ ಪೂಜ್ಯತೆಯಲಿ ಲಿಖಿಸಲು ಹರಸಿರೆಂದು



# ಮರೆಯಾಗುತ್ತಿರುವಮೌಲ್ಯಗಳು

ಕಲ್ಪನ ಕೆ.ಎಸ್. ಹಾಸನ

**||ಮರೆಯಾಗುತ್ತಿ ರುವಮೌಲ್ಯ ಗಳು||**

ಮರೆಯಾಗುತಿತ ವೆ ಜೀವನದಲ್ಲಿ

ಮೌಲ್ಯ ಗಳಿಿಂದು

ಮುರಿದುಬಿೀಳುತಿವೆ ನವವಿವಾಹತರ

ಸಂಬಂಧಗಳಿಿಂದು

ಹೆಣ್ಣು ತೀರಿಸುವಲ್ಲಿ ಕೇಳುವರು

ಅಪಪ ಅಮಮ ಿಂದಿರುಜೊತೆ ಇರಬಾರದಿಂದು

ಗಂಡು ಹೆತತ ವರು ಕೇಳುವರು

ಒಬಬ ಳೇ ಮಗಳ ಎಿಂದು

ಎಲ್ಲಿ ಎಡುವುತಿಹರು

ತಂದತಾಯೀಗಳಿಿಂದು

ಬಾಳುತಿಹರು ಎಲ್ಿ ರೂಸ್ವಾ ಥಥದ ಬದುಕು.

ಮರೆತಿಹರು ಹೆತತ ವರು ಮಕಕ ಳಿಗೆ

ಮೌಲ್ಯ ಗಳನುನ ಕಲ್ಲಸಲ್ಲಿಂದು

ಇಿಂದಿನ ಮಕಕ ಳಲ್ಲ ನನನ ನಮರ ತೆಯವಿನಂತಿ.

ಪ್ರ ಿೀತಿಸಿರಿ ಪರಸಪ ರ ಗೌರವಿಸಿರಿ ನಮಮ ಕುಟಿಂಬದವರನುನ.

ಕೈಜೊೀಡಿಸಿರಿ ಪರಸಪ ರ ಕಷ್ಟ ಸುಖಗಳಲ್ಲಿ

ತರೆಯರಿ ಅಹಂದಪಥ ಎಿಂಬ

ಎರೆಡು ಪದಗಳನುನ

ಜೇನುಗೂಡಾಗಿಸಿರಿ ನಮಮ ಪ್ರ ಿೀತಿಯಸಂಸ್ವರ ನೌಕೆಯನುನ.




KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಮಧ್ವಾಚಾರ್ಯ



ಉಮಾ ರಮೇಶ್. ನ್ಯೂಜೆರ್ಸಿ





# ಅವವೋಕಾಡೋ

ಹಿತಾರ್ಥ್ ಚಂದ್ರ . ನ್ಯೂಜೆರ್ಸಿ





**ಸಾರ್ಥಕ್.** *ನ್ಯೂಜೆರ್ಸಿ*




ಜೈ ಶ್ರೀ ರಾಮ್



# ಚಿತ್ರ ಕಲೆ

ದಿಯಾ ರಜನೀಶ. ನ್ಯೂಜೆರ್ಸಿ



# ಚಿತ್ರ ಕಲೆ



ದಿಯಾ ರಜನೀಶ. ನ್ಯೂಜೆರ್ಸಿ





**ಸ್ವರೂಪ್.** *ನ್ಯೂಜೆರ್ಸಿ*




ಪರ್ಸನಲ್ ಸ್ಫಟಿ ಆನ್ ಬೈಕ್



# ಕ್ಯಾಮೆರಾ ಕಣ್ಣು

ಚೈತ್ರದ ಭೃಂಗ.....

# ಚಿತ್ರ ಕಲೆ



**ಉಮಾ ಕರಣಮ್.** *ನ್ಯೂಜೆರ್ಸಿ*






# ಚಿತ್ರ ಕಲೆ

**ಉಮಾ ಕರಣಮ್.** *ನ್ಯೂಜೆರ್ಸಿ*





ಉಮಾ ಕರಣಮ್. ನ್ಯೂಜೆರ್ಸಿ






KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ